8. ನಿಯಮ 69ರ ಮೇರೆಗೆ

ವಿಷಯ: ರಾಜ್ಯದಲ್ಲಿ ತೆಂಗಿನ ಮರದಿಂದ ನೀರಾ ಇಳಿಸಲು ಅನುಮತಿ ನೀಡುವ ಬಗ್ಗೆ. (ಮು.ವ)

ಶ್ರೀ ಡಿ.ಬಿ.ಸದಾನಂದಗೌಡ(ಪುತ್ತೂರು): ಮಾನ್ಯ ಛೇರ್ಮನ್‌ರವರೆ, ನಾನು ಎರಡು ಪ್ರಮುಖ ವಿಷಯಗಳ ಬಗ್ಗೆ ಮಾತ್ರ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ, ಈ ಸರ್ಕಾರ ಎಲ್ಲಾ ನಿಲುವುಗಳನ್ನು ಪೂರ್ವಗ್ರಹಪೀಡಿತ ದೃಷ್ಟಿಯಿಂದ ನೋಡುವಂಥ ಒಂದು ಕೆಲಸ ಮಾಡುತ್ತಿದೆ. ಯಾವುದೇ ಒಂದು ವಿಷಯದ ಬಗ್ಗೆ ಇಲ್ಲಿ ಚರ್ಚೆಯಾದ ನಂತರ ಅಂತಿಮವಾದ ತೀರ್ಮಾನವನ್ನು ಇಲ್ಲಿಯೇ ತೆಗೆದುಕೊಳ್ಳಬೇಕು. ಆದರೆ, ಇವರು ಒಂದು ತೀರ್ಮಾನ ಮೊದಲೇ ತೆಗೆದುಕೊಂಡು ಅನಂತರ ಇದನ್ನು ಚರ್ಚೆಗೆ ಪರಿವರ್ತನೆ ಮಾಡುತ್ತಿದ್ದಾರೆ. ಕೊನೆಗೆ ಅವರ ಮೊದಲ ತೀರ್ಮಾನವೇ ಅಂತಿಮ ತೀರ್ಮಾನವಾಗಿ ಪ್ರಕಟಣೆಯಾಗುವುದನ್ನು ನಾವು ನೋಡುತ್ತಿದ್ದೇವೆ. ಶಿಕ್ಷಣ ಸಚಿವರಾಗಿರತಕ್ಕಂಥ ಡಾ||ಜಿ.ಪರಮೇಶ್ವರ್‌ರವರು ಮಾತ್ರ ಹೇಳಿದ ಹಾಗೆ ನಡೆದುಕೊಂಡಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಈ ವಿಷಯವನ್ನು ಹೇಳಿದರೆ, ಎಲ್ಲರಿಗೂ ಬಾಧಕವಾಗಬಹುದು. ಆದ್ದರಿಂದ ನಾನೇನೂ ಹೇಳುವುದಕ್ಕೆ ಹೋಗುವುದಿಲ್ಲ. ನುಸಿ ರೋಗದ ಬಗ್ಗೆ ಕಳೆದ ಮೂರು ತಿಂಗಳಿಂದ ಇಡೀ ರಾಜ್ಯದಲ್ಲಿಯೇ ರೈತರು ಚಳುವಳಿ ಮಾಡುತ್ತಿರುವಂಥಾದ್ದನ್ನು ನಾವು ನೋಡುತ್ತಿದ್ದೇವೆ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಛೇರ್ಮನ್‌ರವರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಡಿ.ಬಿ.ಸದಾನಂದಗೌಡ: ನುಸಿ ರೋಗದ ಬಾಧೆಯನ್ನು ತಡೆದುಕೊಳ್ಳಬಹುದು. ಆದರೆ, ಮಾನ್ಯ ನೀಲಕಂಠಪ್ಪನವರ ಬಾಧೆಯನ್ನು ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ.

SRI B.R.NEELAKANTAPPA:- Point of order!

MR.CHAIRMAN:- What is the Point of legitimate Order involved?

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಛೇರ್ಮನ್‌ರವರೆ, ನುಸಿರೋಗ ಬರುವುದಕ್ಕಿಂತ ಮುಂಚಿತವಾಗಿ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡಿರುವಂಥಾದ್ದನ್ನು ಪ್ರಕಟಣೆ ಮಾಡಿದ ನಂತರ ಇಲ್ಲಿ ಚರ್ಚೆ ಮಾಡಲಾಗುತ್ತಿದೆ ಎಂದು ಸನ್ಮಾನ್ಯ ಸದಾನಂದಗೌಡರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರ ಹೇಳಿಕೆಯನ್ನು ಬೇರ್ಪಡಿಸಿ ಹೇಳುವುದಾದರೆ, ಲೋಕಸಭೆ ನಡೆಯುವಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರ

ಸಚಿವಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡು ಪೆಟ್ರೋಲ್ ಬೆಲೆಯನ್ನು ಏರಿಸಿದರು. ಇವನ್ನು ಆ ಸಂದರ್ಭದಲ್ಲಿ ಯಾರೂ ಕೇಳಲಿಲ್ಲ? ಅವರ ಮುಂದೆ ಕತ್ತೆ ಸತ್ತಿದ್ದರೂ ಕೂಡ ನಮ್ಮ ಮುಂದೆ ನೊಣ ಸತ್ತಿದೆ ಎಂದು ಸನ್ಮಾನ್ಯ ಸದಾನಂದಗೌಡರು ಹೇಳುತ್ತಿದ್ದಾರೆ. ಇದರ ಬಗ್ಗೆ ತಾವು ಸ್ವಲ್ಪ ಚಿಂತನೆ ಮಾಡಬೇಕು.

MR.CHAIRMAN:- What is the Point of Order involved?

(ಗೊಂದಲ)

ಶ್ರೀ ಬಿ.ಆರ್.ನೀಲಕಂಠಪ್ಪ: ಇನ್ನೊಬ್ಬರ ಬಗ್ಗೆ ಕೈ ತೋರಿಸಿ ಹೇಳುವುದಕ್ಕೆ ಇವರಿಗೆ ನೈತಿಕತೆ ಎಲ್ಲಿದೆ?

ಛೇರ್ಮನ್: ಪಾಯಿಂಟ್ ಆಫ್ ಆರ್ಡರ್ ಏನೆಂಬುದನ್ನೇ ಹೇಳಲಿಲ್ಲ?

ಶ್ರೀ ಬಿ.ಆರ್.ನೀಲಕಂಠಪ್ಪ: ನಾನು ಈಗಾಗಲೇ ಪ್ರಸ್ತಾಪ ಮಾಡಿರತಕ್ಕಂಥ ವಿಷಯವೇ ನನ್ನ ಪಾಯಿಂಟ್ ಆಫ್ ಆರ್ಡರ್.

ಶ್ರೀ ಡಿ.ಬಿ.ಸದಾನಂದಗೌಡ: ಮಾನ್ಯ ಛೇರ್ಮನ್‌ರವರೆ, ಸನ್ಮಾನ್ಯ ನೀಲಕಂಠಪ್ಪನವರು ಪ್ರಸ್ತಾಪಿಸಿದ ವಿಷಯದಲ್ಲಿ ಪಾಯಿಂಟ್ ಆಫ್ ಆರ್ಡರ್ ಇಲ್ಲ, ಅವರೇ ಔಟ್ ಆಫ್ ಆರ್ಡರ್ ಆಗಿದ್ದಾರೆ. ಸರ್ಕಾರ ಈ ರೀತಿಯಾದಂಥ ನಿಲುವನ್ನು ತೆಗೆದುಕೊಳ್ಳತಕ್ಕಂಥಾದ್ದು ಬಹುಶಃ ಈ ಚರ್ಚೆ ಗೌರವ ಕೊಡುವಂಥ ವ್ಯವಸ್ಥೆ ಅಲ್ಲ. ನೀರಾ ಇಳಿಸುವುದಕ್ಕೆ ಸಧ್ಯಕ್ಕೆ ಅನುಮತಿ ಕೊಡುವುದಿಲ್ಲವೆಂದು ಸರ್ಕಾರ ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡಿರತಕ್ಕಂಥ ತೀರ್ಮಾನವನ್ನು ನಮ್ಮ ನಾಯಕರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಈ ವಿಷಯ ಈಗಾಗಲೇ ಎಲ್ಲಾ ಪತ್ರಿಕೆಗಳಲ್ಲಿಯೂ ಕೂಡ ಬಂದಿದೆ. ಇದು ಒಳ್ಳೆಯ ಸಂಪ್ರದಾಯವಲ್ಲ ಎನ್ನತಕ್ಕಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀರಾ ಇಳಿಸುವುದಕ್ಕೆ ಅನುಮತಿ ಕೊಡಬೇಕೆಂದು ಈ ಸದನದಲ್ಲಿ ನಿಯಮ 69ರ ಅಡಿಯಲ್ಲಿ ಚರ್ಚೆಯಾಗುತ್ತಿದೆ. ಈ ಸಂದರ್ಭದಲ್ಲಿ ಚರ್ಚೆಯಿಂದ ಬರತಕ್ಕಂಥ ತೀರ್ಮಾನವೇ ಅಂತಿಮ ತೀರ್ಮಾನವಾಗಬೇಕೇ ಹೊರತು ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಬೇರೊಂದು ತೀರ್ಮಾನ ತೆಗೆದುಕೊಳ್ಳತಕ್ಕಂಥಾದ್ದು ಸೂಕ್ತ ಅಲ್ಲ ಎನ್ನುವಂಥಾದ್ದನ್ನು ಈ ಸದನದ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಒಂದು ವೇಳೆ ಯಾವುದಾದರೊಂದು ನಿಯಮದ ಅಡಿಯಲ್ಲಿ ಈ ಸದನದಲ್ಲಿ ಆ ವಿಷಯ ಚರ್ಚೆ ಆಗದೇ ಇದ್ದ ಪಕ್ಷದಲ್ಲಿ ಅವರು ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳತಕ್ಕಂಥ ತೀರ್ಮಾನ ಸೂಕ್ತವಾಗಿರುತ್ತಿತ್ತು. ಇನ್ನೊಂದು ಪ್ರಮುಖ ವಿಚಾರ ಏನೆಂದರೆ, ಇದರ ಬಗ್ಗೆ ವ್ಯಾಖ್ಯಾನ, ವಿಶ್ಲೇಷಣೆ ಆಗುತ್ತದೆಯೋ ಅಥವಾ ಇಲ್ಲವೋ ಎನ್ನತಕ್ಕಂಥ ಮಾತು ಎಲ್ಲಾ ಕಡೆ ಕೇಳಿಬರುತ್ತಿದೆ. ಮಾನ್ಯ ತೋಟಗಾರಿಕೆ ಸಚಿವರು ಮೈಸೂರಿನಲ್ಲಿರತಕ್ಕಂಥ

ಡಿಎಫ್‌ಆರ್‌ಎಲ್‌ಗೆ ಭೇಟಿ ಕೊಟ್ಟಿದ್ದರು. ಹಾಗೆಯೇ ಈ ಸಂಸ್ಥೆಯ ಜೊತೆ ಪತ್ರ ವ್ಯವಹಾರವನ್ನೂ ಕೂಡ ಮಾಡಿದ್ದಾರೆ. ಸರ್ಕಾರ ಇವತ್ತಿನ ದಿವಸ ಯಾವುದೇ ಒಂದು ವಿಷಯದ ಬಗ್ಗೆ ತುರ್ತು ತೀರ್ಮಾನ ತೆಗೆದುಕೊಳ್ಳುವುದು ಬೇಡ. ಸುಮಾರು ಆರು ತಿಂಗಳ ಕಾಲ ನೀರಾವನ್ನು ಕೆಡದಂತೆ ಇಡಬಹುದೆಂದು, ಒಂದು ಸೂಕ್ಷ್ಮವಾದ ವಿಚಾರವನ್ನು ಈಗಾಗಲೇ ಸಿಎಫ್‌ಟಿಆರ್‌ಐ ರವರು ಹೇಳಿದ್ದಾರೆ. ಮಾನ್ಯ ಸಚಿವರು ಕಳುಹಿಸಿರುವ ಪತ್ರಕ್ಕೆ ಡಿಎಫ್‌ಆರ್‌ಎಲ್ ಸಂಸ್ಥೆಯವರು ಸಹ ಒಂದು ರಿಪ್ಲೈ ಕಳುಹಿಸಿಕೊಟ್ಟಿದ್ದಾರೆ. ಇದನ್ನು ನಾನು ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, "With reference to the discussion held with the Hon'ble Minister of State for Horticulture, Government of Karnataka Sri Allam Veerbhadrappa, during his visit to D.F.R.L. Mysore on 7-7-2001, I wish to inform that we have already started preliminary work on the "Neera" sample provided by the farmers for its preservation to extend the shelf-life and maintain the nutritive value. A detailed project indicating the funds required etc., will be submitted shortly." So, when the DFRL has already taken initiation on the experiment of Neera...

SRI ALLAM VEERABHADRAPPA:- DFRL has not done any research on this. They have done only the analysis of Neera, not any research on preservation of Neera.

SRI D.V.SADANANDAGOWDA: You have received a letter from them.

MR.CHAIRMAN:- This can be construed this way. The matter has been referred to CFTRI. That itself is not final.

ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ನಾನು ಏನು ಹೇಳುತ್ತಿದ್ದೇನೆಂದರೆ, ಇದರ ಬಗ್ಗೆ ಅವರು ಈಗಾಗಲೇ ಎಕ್ಸ್‌ಪೆರಿಮೆಂಟ್ ಮಾಡಲಿಕ್ಕೆ ಶುರು ಮಾಡಿದ ಮೇಲೆ ಅವರು ಕೊಡುವ ರಿಪೋರ್ಟ್‌ನ ಆಧಾರದ ಮೇಲೆ ಡಿಸಿಷನ್‌ಗಳನ್ನು ತೆಗೆದುಕೊಳ್ಳಬೇಕೇ ಹೊರತು ಪೂರ್ವ ನಿಯೋಜಿತವಾಗಿ ಅಲ್ಲವೆಂದು ಹೇಳುವಂತದ್ದು ನನ್ನ ವಾದ. ನೀರಾದ ಬಗ್ಗೆ ಅಲ್ಲಿ ಅವರು ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಪ್ರಯೋಗದ ಹಿನ್ನೆಲೆಯಲ್ಲಿ ಹೇಗೆ ಮಾಡಬೇಕೆನ್ನುವ ತೀರ್ಮಾನಗಳನ್ನು ಕೊಡಬೇಕಷ್ಟೆ.

MR.CHAIRMAN:- You must be thankful to the Minister. He has taken the initiative to go to CFTRI, sit with the scientists. that shows that he is serious about the matter.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ನಾನು ನಮ್ಮ ಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಏಕೆಂದರೆ ಅವರು ಈ ಬಗ್ಗೆ ಪ್ರಾರಂಭಿಕ ಹಂತದಲ್ಲಿ ಸ್ವಲ್ಪ ಇನಿಷಿಯೇಷನ್ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಪ್ರಯೋಗಗಳು ಆಗಬೇಕು, ವೈಜ್ಞಾನಿಕ ವಿಶ್ಲೇಷಣೆಯಾಗಬೇಕೆನ್ನುವ ಮಾತುಗಳ ಮುಖಾಂತರ ಅವರು ಅಲ್ಲಿ ಸಿಎಫ್‌ಟಿಆರ್‌ಐಗೆ ಹೋಗಿ ಪ್ರಯತ್ನಗಳನ್ನು ಮಾಡಿದ್ದಾರೆ. ನಾನು ಅವರಿಗೆ ಸದನದ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಏಕೆಂದರೆ ವೈಜ್ಞಾನಿಕ ವಿಶ್ಲೇಷಣೆಗಳಿಂದ ಅದು ಸಾಬೀತಾದರೆ ನಾಳೆ ನೀರಾ ಇಳಿಸಲಿಕ್ಕೆ ಅದಕ್ಕೆ ಒಪ್ಪಿಗೆ ಕೊಡಲಿಕ್ಕೆ ಸರ್ಕಾರ ಖಂಡಿತಾ ಬದ್ಧವಾಗಿದೆಯಾ ಎನ್ನುವಂತಹ ಮಾತನ್ನೂ ಕೂಡ ಹೇಳಬೇಕಾಗಿದೆ. ನಾಳೆ ಇನ್ನೊಂದು ಮಾತನ್ನು ಹೇಳಬಾರದು. ಯಾವುದೇ ಡಿಸಿಷನ್ ತೆಗೆದುಕೊಂಡರೂ ಆ ವರದಿಯ ಆಧಾರದ ಮೇಲೆ ತೆಗೆದುಕೊಂಡರೆ ಒಳ್ಳೆಯದಾಗಬಹುದು. ಏಕ್‌ದಂ ನೀರಾ ಇಳಿಸಲಿಕ್ಕೆ ಅವಕಾಶವಿಲ್ಲವೆಂದು ಹೇಳುವುದು ಸರಿಯಲ್ಲವೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಈವೊಂದು ಪ್ರಮುಖವಾದ ಅಂಶವನ್ನು ತಾವೇನು ವಿಷಯ ಸಮಿತಿಗಳನ್ನು ಮಾಡಿದ್ದೀರಿ ಆ ಸಮಿತಿಗಳಲ್ಲಿ ಬೇರೆ ಬೇರೆ ಪಕ್ಷಗಳ ಸದಸ್ಯರು ಇದ್ದಾರೆ. ಕೃಷಿ ಇಲಾಖೆ ವಿಷಯ ಸಮಿತಿಯಲ್ಲಿ ಹಿರಿಯರಾದ ಕೃಷಿ ವಿಚಾರವನ್ನು ತಿಳಿದಂತಹ ಮಾನ್ಯ ಭೈರೇಗೌಡರು ಸಮಿತಿಯ ಅಧ್ಯಕ್ಷರೂ ಕೂಡ ಆಗಿದ್ದಾರೆ. ಈಗಾಗಲೇ ವರದಿಯನ್ನು ಸದನದ ಮುಂದೆ ಸಬ್‌ಮಿಟ್ ಮಾಡಿದ್ದಾರೆ. ಬಹುಶಃ ಈ ಇಲಾಖಾ ಸಮಿತಿಯ ವಿಚಾರಗಳನ್ನು ಸರ್ಕಾರ ಅತ್ಯಂತ ಗಮನದಲ್ಲಿಟ್ಟುಕೊಳ್ಳುವುದು ಸೂಕ್ತ. ಅದರಲ್ಲಿ ಏನು ಹೇಳಿದ್ದಾರೆಂದರೆ, ನುಸಿಪೀಡೆ ರೋಗ ತಡೆಗಟ್ಟುವ ಬಗ್ಗೆ ದಿನಾಂಕ 25-6-2001ರಂದು ಬೆಂಗಳೂರು ವಿಶ್ವವಿದ್ಯಾನಿಲಯದ ಕೀಟಶಾಸ್ತ್ರ ವಿಜ್ಞಾನಿ ತೋಟಗಾರಿಕಾ ಅಧಿಕಾರಿಗಳು ಹಾಗೂ ಕೃಷಿ ಮತ್ತು ತೋಟಗಾರಿಕಾ ಸಚಿವಾಲಯದ ಅಧಿಕಾರಿಗಳು ನೀಡಿದ ಮಾಹಿತಿಯ ದೀರ್ಘ ಪರಿಶೀಲನೆಯ ನಂತರ ಕೇವಲ ರಾಸಾಯನಿಕಗಳಿಂದ ನುಸಿಪೀಡೆಯನ್ನು ತಡೆಗಟ್ಟಲು ಸಾಧ್ಯವಿಲ್ಲವೆನ್ನುವುದನ್ನು ಅರಿತು ಪ್ರಾಯೋಗಿಕವಾಗಿ ಎಲ್ಲಾ ತೆಂಗು ಬೆಳೆಗಾರರು ಏಕಕಾಲದಲ್ಲಿ ನೀರಾ ಇಳಿಸುವುದರ ಮೂಲಕ ನುಸಿರೋಗವನ್ನು ತಡೆಗಟ್ಟಬಹುದು, ಇದು ವಿಷಯ ಸಮಿತಿಯ ಅಬ್ಸರ್ವೇಷನ್. ಎಷ್ಟು ಮರಗಳಲ್ಲಿ ನೀರಾ ಇಳಿಸುತ್ತೀರಿ ಅಷ್ಟು ಗಿಡಗಳಲ್ಲಿ ರೋಗ ಕಡಿಮೆಯಾಗುತ್ತದೆಂದು ಕೀಟಶಾಸ್ತ್ರ ವಿಜ್ಞಾನಿಗಳು ಹೇಳಿರುವ ಹಿನ್ನೆಲೆಯಲ್ಲಿ ಸರ್ಕಾರ ತಡಮಾಡದೆ ನೀರಾ ಇಳಿಸಲಿಕ್ಕೆ ಒಪ್ಪಿಗೆ ನೀಡುವ ಬಗ್ಗೆ ಪರಿಶೀಲನೆ ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಇದು ಕೇವಲ ವಿರೋಧಪಕ್ಷದವರು ಅಥವಾ ಯಾವುದೋ ಒಂದು ರಾಜಕೀಯ ಪಕ್ಷದವರು ಇರುವಂತಹ ಒಂದು ಸಮಿತಿಯಲ್ಲ. ಈ ಸದನದಲ್ಲಿರುವಂತಹ ಬೇರೆ ಬೇರೆ ರಾಜಕೀಯ ಪಕ್ಷಗಳಿಗೆ ಸೇರಿದಂತಹ ಸದಸ್ಯರು ಕಂಡುಕೊಂಡಂತಹ ವಿಚಾರ. ಇದಕ್ಕೆ ಸರ್ಕಾರ

ಪ್ರಾಮುಖ್ಯತೆಯನ್ನು ಕೊಡಲೇಬೇಕು. ಯಾವುದೇ ಸಂದರ್ಭದಲ್ಲಿ ಕೂಡ ವಿಷಯ ಸಮಿತಿಗಳು ರಿಪೋರ್ಟ್‌ಗಳನ್ನು ಕೊಡುವುದು, ಆ ರಿಪೋರ್ಟ್‌ಗಳು ಕೇವಲ ರಿಪೋರ್ಟ್‌ಗಳಾಗಿ ಉಳಿಯುವುದರಲ್ಲಿ ಅರ್ಥವಿಲ್ಲ. ಇಂತಹ ಒಂದು ಸಂದಿಗ್ಧ ಸಮಯದಲ್ಲಿ ರೈತನ ಸಮಸ್ಯೆಗೆ ಪರಿಹಾರದ ಸೂತ್ರವಾಗಬಹುದು ಎನ್ನುವಂತಹ ರೀತಿಯಲ್ಲಿ ಅವರು ಕೊಟ್ಟಂತಹ ಸಲಹೆಗಳನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕು. ಆ ಮುಖಾಂತರ ತಾವು ಆ ಕೆಲಸಗಳನ್ನು ಮಾಡಬೇಕು. ಮಾನ್ಯ ಕೃಷಿ ಮಂತ್ರಿಗಳು ಕಳೆದ ವರ್ಷ ಸುಮಾರು ಎರಡು ಕೋಟಿಗಳಷ್ಟು ಹಣವನ್ನು ಈ ರೋಗವನ್ನು ತಡೆಗಟ್ಟಲಿಕ್ಕೆ, ಕ್ರಿಮಿನಾಶಕಗಳನ್ನು, ಬೇರೆ ಬೇರೆ ಔಷಧಿಗಳನ್ನು ಸಿಂಪಡಣೆ ಮಾಡಲಿಕ್ಕೆ ಕೊಡುವಂತಹ ಕೆಲಸಗಳನ್ನು ಮಾಡಿದರು. ತಮಗೆ ಈಗಾಗಲೇ ಗೊತ್ತಿದೆ, ಈ ರಾಸಾಯನಿಕ ವಸ್ತು ಸಿಂಪರಣೆಯಿಂದ ಏನೆಲ್ಲಾ ಆಗಿದೆಯೆಂದು. ರಾಸಾಯನಿಕ ವಸ್ತು ಸಿಂಪಡಣೆಯಿಂದ ಏನಾಗಿದೆ ಎಂಬುದು ಬಹುಶಃ ನಮಗೆ ಹೆಚ್ಚು ಅನುಭವವಿದೆ. ನಮ್ಮ ಭಾಗಕ್ಕೆ ಅದು ತಟ್ಟಿದೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳ ರಾಜ್ಯದ ಪಕ್ಕದ ಕಾಸರಗೋಡು ಜಿಲ್ಲೆಗಳಲ್ಲಿ. ಇಂಡೋಸಲ್ಫಾನ್ ಸ್ಪ್ರೇ ಮಾಡುವುದರ ಮುಖಾಂತರ ನೂರಾರು ಕುಟುಂಬಗಳಲ್ಲಿ ಕೈಕಾಲುಗಳನ್ನು ಕಳೆದುಕೊಂಡ ಮಕ್ಕಳು ಹುಟ್ಟಿವೆ. ಭಾರೀ ರೀತಿಯ ಪ್ರತಿಭಟನೆ ನಡೆಯುತ್ತಿದೆ. ಆ ಪರಿಸರದಲ್ಲಿ ಪುನಃ ಸಿಂಪಡಣೆ ಮಾಡಿದರೆ ಬಿಡುವುದಿಲ್ಲವೆನ್ನುವ ಎಚ್ಚರಿಕೆಯ ಮಾತುಗಳನ್ನು ಜನರು ಸರ್ಕಾರಕ್ಕೆ ಹೇಳಿದ್ದಾರೆ. ಹುಟ್ಟುವಂತಹ ಮಕ್ಕಳಿಗೆ ಕಣ್ಣಿಲ್ಲ, ಕೈಯಿಲ್ಲ, ಕಾಲು ಇಲ್ಲ, ಕೈಕಾಲುಗಳು ಇದ್ದರೂ ಪೋಲಿಯೋ ರೋಗಕ್ಕೆ ಪೀಡಿತರಾಗುವ ರೀತಿಯಲ್ಲಿ ರಾಸಾಯನಿಕ ವಸ್ತು ಸಿಂಪಡಣೆಯಿಂದ ಕೇವಲ ಒಂದು ಅವ್ಯವಸ್ಥೆ ನಿರ್ಮಾಣವಾಗುವುದು ಮಾತ್ರವಲ್ಲ, ಸಮಾಜದ ಎಲ್ಲಾ ಮನುಷ್ಯರ ಮೇಲೆ ಒಂದು ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತದೆ ಎನ್ನುವುದನ್ನೂ ಸಹ ಈ ಸಂದರ್ಭದಲ್ಲಿ ಗಮನದಲ್ಲಿಡಬೇಕು. ಬಹುಶಃ ನೀರಾ ಇಳಿಸುವುದರಿಂದ ಇದು ನಿಲ್ಲುತ್ತದೆಂದು ಹೇಳಬಹುದು, ಆದರೆ ರಾಸಾಯನಿಕ ವಸ್ತುಗಳ ಸಿಂಪಡಣೆಗಳು ಅನಾವಶ್ಯಕ. ರಾಸಾಯನಿಕ ವಸ್ತುಗಳ ಸಿಂಪಡಣೆಯಿಂದ ಪರಿಸರ ಹಾಳಾಗುತ್ತದೆ. ಈ ರಾಸಾಯನಿಕ ವಸ್ತು ಸಿಂಪರಣೆಯಿಂದ ರೈತ ಮಿತ್ರರಾದ ಕೀಟಗಳು, ಚಿಟ್ಟೆಗಳು, ಪಕ್ಷಿಗಳು ವಿಶೇಷವಾಗಿ ಪರಾಗಸ್ಪರ್ಶ ಮಾಡುವಂತಹ ಜೇನು ನೊಣಗಳು ನಾಶವಾಗುವಂತಹ ಸಂದರ್ಭಗಳು ಉಂಟು. ಇದರಿಂದ ತೆಂಗಿನಗಿಡದಲ್ಲೇ ಪರಾಗಸ್ಪರ್ಶಕ್ಕೆ ತೊಂದರೆಯಾಗುವಂತಹದ್ದು, ಕಪ್ಪೆಗಳು, ಏಡಿಗಳು ಇವೆಲ್ಲಾ ಹೋಗುವಂಥದ್ದು, ಇಡೀ ಗಾಳಿ ವಿಷಪೂರಿತವಾಗುವಂತಹದ್ದು ಇವೆಲ್ಲಾ ವ್ಯವಸ್ಥೆಗಳು ಆಗುತ್ತದೆ. ಇಂತಹದಕ್ಕೆ ಒಂದು ಪರ್ಯಾಯ ವ್ಯವಸ್ಥೆ ನೀರಾ ಇಳಿಸುವಂತಹದ್ದು ಸರಿಯೆನ್ನುವುದಾದರೆ ಇದಕ್ಕೆ ತಾವು ಆದ್ಯತೆಯನ್ನು ಕೊಡಲೇಬೇಕಾಗುತ್ತದೆ. ಇದನ್ನು ತಾವೂ ಕೂಡ ಒಪ್ಪುತ್ತೀರಿ ಎಂದು ನಾನು ಭಾವಿಸುತ್ತಿದ್ದೇನೆ.

ಛೇರ್ಮನ್: ಔಷಧಿ ಸಿಂಪಡಣೆ ಮಾಡುವುದರಿಂದ ಪರಿಸರ ನಾಶವಾಗುತ್ತದೆ. ಇದು ನಿಮ್ಮ ವಾದವಲ್ಲವೇ? ಆಯಿತು ಸಾಕು ಬಿಡಿ.

ಶ್ರೀ ಡಿ.ವಿ.ಸದಾನಂದಗೌಡ: ಇನ್ನು ಒಂದೆರಡು ಪಾಯಿಂಟ್ ಇದೆ. ಇನ್ನೊಂದು ಸರ್ಕಾರದ ವಾದವಿದೆ. ಅದೇನೆಂದರೆ, ಇವತ್ತು ಸುಮಾರು 10 ಲಕ್ಷ ತೆಂಗಿನ ಮರಗಳಿವೆ. ಅದರಲ್ಲಿ ಎರಡು ಮರಗಳಿಗೆ ನುಸಿರೋಗತಾಗಿದೆ. ಆ ಮರಗಳಿಂದ ನೀರಾ ಇಳಿಸಿದರೆ ಇದನ್ನು ಮಾರ್ಕೆಟ್ ಮಾಡುವಂತಹ ಕೆಲಸ ಕಷ್ಟಕರವಾಗಬಹುದು. ಇದರಿಂದ ಇನ್ನೊಂದು ಪ್ರಮಾದವಾಗಬಹುದು ಎಂದು ಹೇಳುವಂತಹ ವಿಚಾರ ಇಲ್ಲಿ ಪ್ರಸ್ತಾಪವಾಗುವುದನ್ನು ನಾವು ನೋಡುತ್ತಿದ್ದೇವೆ. ನಾನು ಕೇಳುವುದು ಇಷ್ಟೆ, ಇವತ್ತು ಯಾವುದೇ ಒಬ್ಬ ರೈತ ನೀರಾವನ್ನು ಮಾರಾಟ ಮಾಡಿ ಇನ್ನೊಂದು ಮಾಡಿಯೆಂದು ಹೇಳುವುದಕ್ಕೆ ಆದ್ಯತೆಯಿಲ್ಲ. ಇವತ್ತು ಆದ್ಯತೆ ನೀರಾ ತೆಗೆಯುವುದರಿಂದ ನುಸಿರೋಗ ನಿಲ್ಲುತ್ತದೆಂದರೆ ಆ ನೀರಾವನ್ನು ತೆಗೆಯಲಿಕ್ಕೆ ಅವಕಾಶ ಕೊಟ್ಟರೆ ಅವನ ತೆಂಗಿನಮರ ಶಾಶ್ವತವಾಗಿ ಉಳಿಯುತ್ತದೆ. ಇದನ್ನು ಪರಿಗಣನೆ ಮಾಡಬೇಕು. ಮಾನ್ಯ ಕೃಷಿ ಮತ್ತು ತೋಟಗಾರಿಕಾ ಮಂತ್ರಿಗಳಿಗೆ ಗೊತ್ತಿರಬಹುದು, ದಕ್ಷಿಣ ಕನ್ನಡ ಮತ್ತುಉಡುಪಿ ಜಿಲ್ಲೆಯಲ್ಲಿ ಶೇಂದಿ ಮಾರಾಟ ಇದೆ. ತೆಂಗಿನಮರದಿಂದ ನೀರಾ ತೆಗೆಯುತ್ತಿದ್ದಾರೆ, ಅದನ್ನೆ ಶೇಂದಿ ಎಂದು ಹೇಳುವುದು. ಈವತ್ತೂ ಕೂಡ ದೊಡ್ಡ ವಿಪರ್ಯಾಸವಾಗುತ್ತಿದೆಯಲ್ಲಾ ಸಹಕಾರ ಸಂಘಗಳ ಮುಖಾಂತರ, ಇವತ್ತು ನೂರಾರು ಸಹಕಾರಿ ಸಂಘಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾವಿರಾರು ಯುವಕರಿಗೆ ಉದ್ಯೋಗಗಳನ್ನು ಕೊಡುವಂತಹ ಕೆಲಸಗಳನ್ನು ಮಾಡಿವೆ. ಸಾವಿರಾರು ರೈತರಿಗೆ ಅವರ ಜೀವನಕ್ಕೆ ಒಂದು ಆಧಾರವಾಗಿ ಈವೊಂದು ಶೇಂದಿ ಸಹಕಾರಸಂಘಗಳ ಮುಖಾಂತರ ಬದುಕುವಂತಹ ಕೆಲಸಗಳನ್ನು ಮಾಡಿವೆ. ಬಹುಶಃ ನೀರಾ ಇಳಿಸಿದರೂ ಕೂಡ ಇದೇ ಕೆಲಸಗಳನ್ನು ಬೇರೆ ಕಡೆಗಳಿಗೆ ಮಾಡಲಿಕ್ಕೆ ಸಾಧ್ಯವಿದೆ. ನೀರಾ ಇಳಿಸಿದರೆ ಮಾರ್ಕೆಟಿಂಗ್ ವ್ಯವಸ್ಥೆಗಳ ಬಗ್ಗೆ ತಾತ್ಕಾಲಿಕವಾಗಿ ಮಾಡುವುದು ಬೇಡ. ಒಂದು ವೇಳೆ ನೀರಾ ಇಳಿಸಿದರೆ ಮಾರ್ಕೆಟಿಂಗ್ ಇಲ್ಲವೆಂದರೆ ಅವನು ಅದನ್ನು ಚೆಲ್ಲಿ ಏನು ಬೇಕಾದರೂ ಮಾಡಲಿ. ಅದರ ಬಗ್ಗೆ ನಾವು ಚಿಂತನೆ ಮಾಡುವಂತಹ ಅವಶ್ಯಕತೆಯಿಲ್ಲ. ಅವನ ತೆಂಗಿನ ಮರವನ್ನು ಉಳಿಸಿಕೊಳ್ಳಲಿಕ್ಕೆ ಸರ್ಕಾರ ಹಿಂದೇಟು ಹಾಕುವುದು ಇದು ಖಂಡಿತಾ ಒಳ್ಳೆಯದಲ್ಲ. ಇದು ಒಳ್ಳೆಯ ವಿಚಾರವಲ್ಲವೆಂದು ಹೇಳುವಂತಹದ್ದು ನನ್ನ ಭಾವನೆ. ಈ ಹಿನ್ನೆಲೆಯಲ್ಲಿ ತಾವು ನೀರಾ ಇಳಿಸಲಿಕ್ಕೆ ಅನುಮತಿಯನ್ನು ಕೊಡಬೇಕೆಂದು ಹೇಳುವುದು ನನ್ನ ಪ್ರಮುಖ ಅಂಶ. ಇನ್ನೊಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಹೇಳಿರತಕ್ಕ ನಾಲ್ಕು ವಿಚಾರಗಳ ಹಿನ್ನೆಲೆಯಲ್ಲಿ ನೀರಾ ಇಳಿಸಬೇಕೆನ್ನುವುದು ನನ್ನ ಆಗ್ರಹ. ಯಾವುದೇ ಸಂದರ್ಭದಲ್ಲಿ ಏಕಾಏಕಿಯಾಗಿ ಯಾವುದೇ ವಿಚಾರಗಳನ್ನು ಪೂರ್ತಿಯಾಗಿ ತಿಳಿದುಕೊಳ್ಳದೆ ಜನರ ಸಮಸ್ಯೆ ಪರಿಹಾರವಾಗುತ್ತದೆನ್ನುವ ಸಣ್ಣ ಸಂಗತಿಯನ್ನು ತಿಳಿದುಕೊಳ್ಳದೆ ಈ ರೀತಿ ಮಾಡುವುದು ಸರಿಯಲ್ಲ. ನೀರಾ ಇಳಿಸಲಿಕ್ಕೆ ದಯವಿಟ್ಟು ಒಪ್ಪಿಗೆಯನ್ನು ಕೊಡಬೇಕು. ಇದರ ಮುಖಾಂತರ ನೂರಾರು, ಸಾವಿರಾರು ರೈತರ ಬದುಕಿಗೆ ಒಂದು ಕಲ್ಪನೆಯನ್ನು ಕೊಡಬೇಕೆಂದು ಹೇಳುವಂತಹ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಸಭಾಪತಿಯವರೆ, ತಮಗೆ ಧನ್ಯವಾದವನ್ನು ಅರ್ಪಿಸುತ್ತೇನೆ. ಪ್ರಮುಖವಾದ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿದೆ. ಕಳೆದ ಅಧಿವೇಶನದಲ್ಲಿ ತೆಂಗಿಗೆ ನುಸಿರೋಗ ಅಂಟಿ ನಷ್ಟವಾಗಿರುವ ಬಗ್ಗೆ ಚರ್ಚೆ ಮಾಡಲಾಗಿದೆ. ಈ ಅಧಿವೇಶನದಲ್ಲಿ ಸಹ ಅದೇ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ನುಸಿರೋಗ ತೆಂಗಿನ ಮರಗಳಿಗೆ ಬಂದು ಲಕ್ಷಾಂತರ ಮರಗಳಿಗೆ ತೊಂದರೆಯಾಗಿದೆ. ಅದರಿಂದ ರೈತರಿಗೆ ಬಹಳ ನಷ್ಟವಾಗಿರತಕ್ಕದ್ದು ಇದೆ. ಹಿಂದೆ ಚರ್ಚೆ ನಡೆದಾಗ ನಾನೂ ಸಹ ಭಾಗವಹಿಸಿದ್ದೆ. ಆ ಚರ್ಚೆಯಾಗಿ ಐದಾರು ತಿಂಗಳಾಗಿದೆ. ನಮ್ಮ ಕರ್ನಾಟಕದಲ್ಲಿ ಶೇಕಡ 30ರಷ್ಟು ತೆಂಗಿನಮರಗಳಿಗೆ ಇವತ್ತು ನುಸಿರೋಗ ತಗುಲಿ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಿ ಬಹಳ ತೀಕ್ಷ್ಣತೆಯಿಂದ ಸರ್ಕಾರವನ್ನು ನಾವೆಲ್ಲಾ ತರಾಟೆಗೆ ತೆಗೆದುಕೊಂಡಿದ್ದೇವೆ. ಆಗ ಮಂತ್ರಿಗಳು ಉತ್ತರ ಕೊಟ್ಟಿದ್ದು ಏನು? ನಾವು ಇವತ್ತು ಸಂಶೋದನೆ ನಡೆಸಿ ನುಸಿರೋಗವನ್ನು ತಡೆಗಟ್ಟತಕ್ಕ ಒಂದು ಔಷಧಿ ಮಾನೊಪ್ರೊಟೋಫಾಸ್ ಮತ್ತು ಡೈಕೋಫಾಸ್ ಈ ಎರಡೂ ಔಷಧಿಯನ್ನು ಸಿಂಪಡಣೆ ಮಾಡತಕ್ಕದ್ದು, ತೆಂಗಿನ ಬೇರಿಗೆ ಚುಚ್ಚುಮದ್ದು ಕೊಟ್ಟು ಇದನ್ನು ತಡೆಗಟ್ಟಬಹುದೆಂದು ಉತ್ತರ ಕೊಟ್ಟರು. ಕೆಲವು ಕಡೆ ಇಂಜೆಕ್ಷನ್ ಕೊಟ್ಟು ಮಾಡುತ್ತೇವೆ ಎಂದು ಹೇಳಿದರು. ಅದಕ್ಕೋಸ್ಕರ ತಾವು ಉತ್ತರ ಕೊಟ್ಟಿದ್ದೀರಿ. ಮೂರೂವರೆ ಕೋಟಿ ರೂಪಾಯಿಗಳನ್ನು ಈ ಒಂದು ವಿಚಾರಕ್ಕೋಸ್ಕರ ಖರ್ಚು ಮಾಡುತ್ತೇವೆ ಎಂದು ಹೇಳಿದ್ದೀರಿ. ಮೂರೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಏನಾದರೂ ಇದನ್ನು ತಡೆಗಟ್ಟಿದ್ದೀರಾ? ಸ್ವಲ್ಪಮಟ್ಟಿಗಾದರೂ ಸುಧಾರಣೆ ಆಗಿದೆಯಾ? ಇದರಿಂದ ರೈತ ಬೆಳೆಯುತ್ತಿರತಕ್ಕಂಥ, ತೆಂಗಿನ ಅಭಿವೃದ್ಧಿ ಆಗಿದೆಯೇ ಎಂಬುದರ ಬಗ್ಗೆ ವರದಿಯನ್ನು ತಾವು ಕೊಡಬೇಕು. ಇವತ್ತೂ ಕೂಡ ಅದೇ ಪರಿಸ್ಥಿತಿ ಇದೆ. ಇನ್ನೂ ಕೂಡ ಪರಿಸ್ಥಿತಿ ಉತ್ತಮ ಆಗಿಲ್ಲ. ಸಮಸ್ಯೆ ಮೊದಲಿಗಿಂತ ಗಂಭೀರವಾಗಿದೆ. ಇವತ್ತು ರೈತ ಐದಾರು ತಿಂಗಳಿಂದ ಕಾದು ಏನೂ ಅದರಿಂದ ಉಪಯೋಗ ಆಗದೆ ಈಗ 14-15 ಜಿಲ್ಲೆಗಳಲ್ಲಿ ಏನು ತೆಂಗು ಬೆಳೆಯುತ್ತಿದ್ದಾರೆ ಈ ಎಲ್ಲಾ ರೈತರು ಬೀದಿಗಿಳಿದಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಇಡೀ ದೇಶದಲ್ಲಿ ತೆಂಗು ಬೆಳೆಯಲ್ಲಿ ನಮ್ಮ ರಾಜ್ಯ ಎರಡನೇ ಸ್ಥಾನದಲ್ಲಿದೆ. ಕೇರಳ ರಾಜ್ಯ ಮೊದಲನೇ ಸ್ಥಾನದಲ್ಲಿದೆ. ನಮ್ಮ ರಾಜ್ಯ ಎರಡನೇ ಸ್ಥಾನದಲ್ಲಿದ್ದು ಸುಮಾರು 4 ಲಕ್ಷ 65 ಸಾವಿರ ಹೆಕ್ಟೇರ್‌ನಲ್ಲಿ ನಾವು ತೆಂಗು ಬೆಳೆಯುತ್ತಿದ್ದೇವೆ. ಇದರಲ್ಲಿ ಸುಮಾರು ಏಳೆಂಟು ಕೋಟಿ ಮರಗಳು ಇರಬಹುದು. ಈ ಮರಗಳಲ್ಲಿ 300ರಿಂದ 350 ಕೋಟಿ ತೆಂಗಿನಕಾಯಿಗಳು ಬಿಡತಕ್ಕಂಥ ಸಂದರ್ಭದಲ್ಲಿ, ಇದರಲ್ಲಿ ಶೇಕಡಾ 30ರಷ್ಟೂ ಕೂಡ ಬೆಳೆಯಾಗುತ್ತಿಲ್ಲ. ಹೀಗಾಗಿ ಇದನ್ನೇ ಬದುಕಿಗೆ ಅವಲಂಬಿಸಿಕೊಂಡಿರತಕ್ಕಂಥವರು ಇವತ್ತು ಕಂಗಾಲಾಗಿದ್ದಾರೆ. ಮತ್ತೆ ಸುಮಾರು ಮೂರು-ನಾಲ್ಕು ತಿಂಗಳಿಂದ ಈ ಸಮಸ್ಯೆ ಇದೆ. ನಾನು ಕೇಳುತ್ತೇನೆ, ಸರ್ಕಾರ ಏನಾದರೂ ಇದರ ಬಗ್ಗೆ ಚಿಂತನೆಯನ್ನು ಮಾಡಿದ್ದೀರಾ? ಯಾವುದಾದರೂ ಸಂಶೋಧನೆಗೆ ನೀವು ಈ ವಿಚಾರವನ್ನು ಕೊಟ್ಟು ರೈತನ ಕಷ್ಟವನ್ನು ನಾವು ಹೇಗೆ ಪರಿಹಾರ ಮಾಡಬಹುದು, ಈ ನುಸಿರೋಗವನ್ನು ತಡೆಗಟ್ಟುವ ವಿಧಾನ ಹೇಗೆ ಮತ್ತು ಅವನಿಗೆ ಆಗತಕ್ಕಂಥ ನಷ್ಟವನ್ನು ಯಾವ ರೀತಿಯಿಂದ ಬಗೆಹರಿಸಬಹುದು ಮತ್ತು ಅದಕ್ಕೆ ಪರ್ಯಾಯವಾದಂಥ ವ್ಯವಸ್ಥೆಗಳು ಏನು ಇದರ

ಬಗ್ಗೆ ನೀವು ಏನು ಮಾಡಿದ್ದೀರಿ ಎಂದು ಹೇಳಿದರೆ, ನನಗನ್ನಿಸುತ್ತದೆ ನೀವು ಇಲ್ಲಿಯವರೆಗೂ ಕಣ್ಣುಮುಚ್ಚಿಕೊಂಡು ಕುಳಿತಿದ್ದೀರಿ. ಕಣ್ಣುಮುಚ್ಚಿಕೊಂಡು ಕುಳಿತಿರುವುದೇ ಅಲ್ಲ, ಇನ್ನೊಂದು ಈ ಸರ್ಕಾರ ಎಲ್ಲಿಯವರೆಗೆ ಹೋಗಿದೆ ಎಂದರೆ ಇವತ್ತು ಸದನ ನಡೆಯುತ್ತಿದೆ. ಸದನದಲ್ಲಿ ಈ ವಿಚಾರ ಚರ್ಚೆಯಾಗುತ್ತಿದೆ. ಇಡೀ ರಾಜ್ಯದಾದ್ಯಂತ ಜನರು ಬೀದಿಗಿಳಿದು ಇವತ್ತು ಪೋಲೀಸರಿಂದ ದಬ್ಬಾಳಿಕೆ ಮಾಡಿಸಿಕೊಳ್ಳುತ್ತಿದ್ದು ದಸ್ತಗಿರಿಯಾಗುತ್ತಿದ್ದಾರೆ. ನೀರಾ ಇಳಿಸತಕ್ಕದ್ದನ್ನು ರೈತರೇ ಕೈಗೆತ್ತಿಕೊಂಡು ಇವತ್ತು ತಮ್ಮ ತಮ್ಮ ಮರಗಳಿಂದ ಅವರೇ ನೀರಾ ಇಳಿಸತಕ್ಕಂಥ ಪ್ರವೃತ್ತಿಗೆ ಇಳಿದಿದ್ದಾರೆ. ಅಂದರೆ ಕಾನೂನು ಭಂಗ ಆಗಿರತಕ್ಕದ್ದು ತಮಗೂ ಗೊತ್ತಿದೆ. ಇಷ್ಟೇ ಅಲ್ಲ ಈ ವಿಚಾರ ತೀಕ್ಷ್ಣ ರೂಪವನ್ನು ತಳೆಯುತ್ತಿರುವ ಪರಿಸ್ಥಿತಿಯಲ್ಲಿ ನಾನು ಮೊನ್ನೆ ಪತ್ರಿಕೆಯಲ್ಲಿ ನೋಡಿದೆ. 'ಈ ವಿಚಾರದಲ್ಲಿ ನಮ್ಮ ಸರ್ಕಾರ ಮಂತ್ರಿಮಂಡಲದಲ್ಲಿ ತೀರ್ಮಾನ ತೆಗೆದುಕೊಂಡಿದೆ. ಈ ನೀರಾ ಇಳಿಸುವುದಕ್ಕೆ ಅನುಮತಿ ಕೊಡುವುದಿಲ್ಲ' ಎನ್ನತಕ್ಕಂಥ ತೀರ್ಮಾನ ತೆಗೆದುಕೊಂಡಿದ್ದೇವೆ ಎಂದು ಪತ್ರಿಕೆಯಲ್ಲಿ ಬಂದಿದೆ. ನಾನು ಈ ಸರ್ಕಾರದ ಪ್ರೊಪ್ರ್ಯಾಯಿಟಿಯನ್ನು ಪ್ರಶ್ನೆ ಮಾಡುತ್ತಿದ್ದೇನೆ. ಸದನಕ್ಕಿಂತ ಕ್ಯಾಬಿನೆಟ್ ಹೆಚ್ಚೇನು? ಈ ಸದನದಲ್ಲಿ ಈ ವಿಚಾರ ಚರ್ಚೆಯಾಗುವಾಗ ಮಧ್ಯದಲ್ಲಿ ನೀವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡರೆ ಸದನಕ್ಕೆ ಏನು ಗೌರವ ಕೊಟ್ಟ ಹಾಗೆ ಆಗುತ್ತದೆ? ಈ ಸದನದ ಸಾರ್ವಭೌಮತ್ವಕ್ಕೆ ಏನು ಗೌರವ ಕೊಟ್ಟ ಹಾಗೆ ಆಯಿತು, ಹಾಗೂ ಏನು ಇದರ ಪ್ರೊಪ್ರೈಟಿಯನ್ನು ಪ್ರಶ್ನೆ ಮಾಡುತ್ತಿದ್ದೇನೆ. ಇದಕ್ಕೆ ನೀವು ಉತ್ತರವನ್ನು ಹೇಳಬೇಕಾಗುತ್ತದೆ. ಇವತ್ತು ನಮ್ಮ ಸರ್ಕಾರ ಇದ್ದು, ಇಂತಹ ಏನಾದರೂ ತೀರ್ಮಾನ ಆಗಿದ್ದರೆ ನೀವು ಬಿಡುತ್ತಿದ್ದಿರಾ? ಎಷ್ಟೋ ಸಾರಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಎಷ್ಟೋ ವಿಚಾರಗಳಲ್ಲಿ ಆದರಲ್ಲೂ ಅಧಿವೇಶನ ಸಂದರ್ಭದಲ್ಲಿ ಪತ್ರಿಕಾ ಹೇಳಿಕೆಯನ್ನು ಕೊಟ್ಟರೆ, ಸದನ ನಡೆಯುತ್ತಿರುವಾಗ ಮಂತ್ರಿಗಳು ಏಕೆ ಹೇಳಿಕೆ ಪ್ರಕಟ ಮಾಡುತ್ತಿದ್ದಾರೆ ಎಂದು ಹೇಳಿ ನಮ್ಮನ್ನು ಪ್ರಶ್ನೆ ಮಾಡಿದ್ದರು. ಅಂತಹ ಸಂದರ್ಭದಲ್ಲಿ ನೀವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡಿದ್ದೀರಿ ಎಂದು ಪತ್ರಿಕೆಯಲ್ಲಿ ಬಂದಿದೆಯಲ್ಲಾ, ಇದು ಯಾವ ಪ್ರೊಪ್ರೈಟಿ ಎನ್ನತಕ್ಕದ್ದು ನನ್ನ ಮೂಲಭೂತವಾದಂಥ ಪ್ರಶ್ನೆ. ಮತ್ತೆ ಇವತ್ತು ನಾನು ಕೇಳುತ್ತೇನೆ, ಯಾವುದಾದರೂ ಸಿ.ಎಫ್.ಟಿ.ಆರ್. ಆಗಲಿ, ಡಿಫೆನ್ಸ್ ಲ್ಯಾಬರೇಟರಿಯವರಾಗಲೀ ಇದರ ಬಗ್ಗೆ ಅವರು ಏನು ವರದಿಯನ್ನು ಕೊಟ್ಟಿದ್ದಾರೆ? ಈ ನೀರಾವನ್ನು ಇಳಿಸಿದ ಮೇಲೆ ಏನೂ ಸೂರ್ಯ ಬಂದಾಕ್ಷಣ ಅದು ಫರ್ಮಂಟೇಷನ್ ಆಗಿ ಸೇಂದಿಯಾಗಿ ಪರಿವರ್ತನೆಯಾಗುವುದನ್ನು ತಪ್ಪಿಸುವುದಕ್ಕೆ, ಅದನ್ನು ನೀರಾ ರೀತಿಯಲ್ಲೇ ಪ್ರಿಸರ್ವ್ ಮಾಡತಕ್ಕಂಥ ಒಂದು ವಿಧಾನವನ್ನು ಕಂಡುಹಿಡಿದಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ಮಾನ್ಯ ಸದಾನಂದಗೌಡರು, ಸುಮಾರು ಆರು ತಿಂಗಳ ತನಕ ಇದನ್ನು ಪ್ರಿಸರ್ವ್ ಮಾಡತಕ್ಕಂಥ ವರದಿ ಬಂದಿದೆಯೆಂದು ಹೇಳಿದ್ದಾರೆ. ಇನ್ನೊಂದು ನಮ್ಮ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಎಂಟೊಮಾಲಜಿ(ಕೀಟಶಾಸ್ತ್ರ) ವಿಭಾಗ ಇದೆ. ಆ ವಿಭಾಗದ ಮುಖ್ಯಸ್ಥರಾದ ಹಿರಿಯ ಪ್ರೊಫೆಸರ್ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದು ನನ್ನ ಹತ್ತಿರ ಇದೆ. ಅದು ತಮ್ಮ ಗಮನಕ್ಕೂ

ಬಂದಿರಬಹುದು. ಅದರಲ್ಲಿ ಅವರು ಏನು ಹೇಳಿದ್ದಾರೆ ಎಂದರೆ ಈ ನುಸಿರೋಗವನ್ನು ತಡೆಗಟ್ಟುವುದಕ್ಕೆ ಅವಕಾಶ ಇದೆ. ಆದರೆ ಅದರ ಸಾಧಕಬಾಧಕಗಳನ್ನು ಅವರು ಹೇಳಿದ್ದಾರೆ. ಅವರು ಹೇಳಿರತಕ್ಕಂಥ ವರದಿಯಲ್ಲಿ ತೆಂಗಿನ ಮರಗಳನ್ನು ಮೂರು ಭಾಗವಾಗಿ ಮಾಡಬಹುದು. ಒಂದು ವರ್ಗದಲ್ಲಿ, ನುಸಿರೋಗ ತಟ್ಟದೇ ಇರತಕ್ಕಂಥ ಕೆಲವು ಮರಗಳಿವೆ. ಇನ್ನೊಂದು ವರ್ಗದ ಮರಗಳಿಗೆ ನುಸಿರೋಗ ಬಂದರೂ ಕೂಡ ಸ್ವಲ್ಪಮಟ್ಟಿಗೆ ತೆಂಗು ಬೆಳೆಯಾಗುತ್ತದೆ. ಅವುಗಳಲ್ಲಿ ತೆಂಗಿನಕಾಯಿ ಬಿಡತಕ್ಕಂಥಾದ್ದು ಇದೆ, ಮೂರನೇ ವರ್ಗದ ಮರಗಳಲ್ಲಿ ತೆಂಗು ಬೆಳೆಯುವುದೇ ಇಲ್ಲ. ಆ ದೃಷ್ಟಿಯಿಂದ ಮೂರನೇ ವರ್ಗದಲ್ಲಿ ತೆಂಗಿನಕಾಯಿ ಉತ್ಪತ್ತಿ ಆಗುವುದಿಲ್ಲ ಎಂದು ಅವರು ಹೇಳಿದ್ದಾರೆ. ಮತ್ತೆ ಅವರು ಇನ್ನೊಂದು ವರದಿಯನ್ನು ತಾಂತ್ರಿಕತೆ ರೂಪದಲ್ಲಿ ಕೊಟ್ಟಿದ್ದಾರೆ. ಅದೇನೆಂದರೆ ರೈತರಿಗೆ ಎರಡು ವಿಧಾನಗಳಿವೆ. ತೆಂಗಿನ ಬೆಳೆ ತೆಗೆದುಕೊಳ್ಳಬಹುದು ಮತ್ತು ನೀರಾವನ್ನೂ ಇಳಿಸಬಹುದು. ಅದು ಹೇಗೆ ಎಂದರೆ ಒಂದನೇ ವರ್ಗದಲ್ಲಿ ಏನು ತೆಂಗಿಗೆ ರೋಗ ತಟ್ಟುತ್ತದೆ ಅದನ್ನು ಸಂಪೂರ್ಣವಾಗಿ ನಿಲ್ಲಿಸಬಹುದು. ಅದು ಹೇಗೆಂದರೆ ಆ ಹೊಂಬಾಳೆ ಮೇಲೆ ನುಸಿಹುಳಗಳು ತಟ್ಟುವುದಿಲ್ಲ. ಅದು ಏನು ಕಾಯಿ ಬಿಡುತ್ತದಲ್ಲಾ, ಆಗ ಈ ರೋಗ ತಟ್ಟುವಂಥಾದ್ದು. ಆದರೆ ಹೊಂಬಾಳೆ ಮಟ್ಟದಲ್ಲಿ ಅದು ತಟ್ಟುವುದಿಲ್ಲ. ಆದ್ದರಿಂದ ನೀರಾವನ್ನು ಯಾವಾಗ ಹೊಂಬಾಳೆ ಮೂಲಕ ಎಕ್ಸ್‌ಟ್ರಾಕ್ಟ್ ಮಾಡುತ್ತಾರೆ, ಅದು ಕಾಯಿ ಬಿಡುವುದಕ್ಕೆ ಮೊದಲೇನೆ ನೀರಾವನ್ನು ಇಳಿಸುವಂಥಾದ್ದು. ಅದರಿಂದ ನುಸಿರೋಗವನ್ನು ಸ್ವಲ್ಪಮಟ್ಟಿಗೆ ತಡೆಗಟ್ಟಬಹುದು ಎಂದು ಹೇಳಿದ್ದಾರೆ. ಇನ್ನೊಂದು ಏನು ಹೇಳಿದ್ದಾರೆ ಎಂದರೆ, ಹದಿನೈದು ತಿಂಗಳ ಮಟ್ಟಿಗೆ ನೀರಾವನ್ನು ಇಳಿಸುವುದು, ಇನ್ನು ಬೇರೆ ತಿಂಗಳಲ್ಲಿ ನೀವು ತೆಂಗಿನಕಾಯನ್ನು ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಹೀಗೆ ಮೂರು ವರ್ಗಗಳನ್ನು ಮಾಡಿ ಒಂದು ವರ್ಗದಲ್ಲಿ ಸಂಪೂರ್ಣವಾಗಿ ತೆಂಗನ್ನು ಬೆಳೆಯಬಹುದು ಎಂದು ಹೇಳಿರುವಂಥಾದ್ದು ಇದೆ. ಕೆಲವು ಮರಗಳಲ್ಲಿ ನೀರಾವನ್ನು ಇಳಿಸಬಹುದು ಮತ್ತು ಅದನ್ನು ಮಾರ್ಕೆಟಿಂಗ್ ಮಾಡುವಂಥಾ ವಿಧಾನ ಏನು ಎಂಬುದು ಮುಖ್ಯ. ತಾವು ಏನು ಹೇಳಿದ್ದೀರಿ ಎಂದರೆ ಒಂದು ವರ್ಷದಲ್ಲಿ ಒಂದು ಮರದಿಂದ ಸುಮಾರು 1200 ಲೀಟರ್ ನೀರಾ ಬರುತ್ತದೆ, ಅದನ್ನು ಎಲ್ಲಿ ಚೆಲ್ಲುವುದು ಎಂದು. ನನ್ನ ಅಭಿಪ್ರಾಯ ಏನೆಂದರೆ, ಈ ನೀರಾದಿಂದ ಬೇರೆ ಏನೇನು ಪದಾರ್ಥಗಳನ್ನು ಮಾಡಬಹುದು ಎಂಬುದನ್ನು ನೋಡಬೇಕು. ಇದರ ಬಗ್ಗೆ ಸಂಶೋಧನೆ ಮಾಡಿ ಯಾವ್ಯಾವ ರಾಜ್ಯಗಳಲ್ಲಿ ಏನು ಮಾಡಿದ್ದಾರೆ ಎಂದು ಅದನ್ನಾದರೂ ಮಾಹಿತಿಯನ್ನು ತಾವು ತೆಗೆದುಕೊಂಡಿದ್ದೀರಾ? ನನ್ನ ಅಭಿಪ್ರಾಯದಲ್ಲಿ ಕೇರಳ ಇರಬಹುದು, ಮಹಾರಾಷ್ಟ್ರ ಇರಬಹುದು ಅದನ್ನು ಗುಡಿ ಕೈಗಾರಿಕೆಯೆಂದು ಪರಿಗಣಿಸಿ, ಸಣ್ಣಸಣ್ಣ ಮಿಲ್ಕ್ ಸೊಸೈಟಿ ರೀತಿಯಲ್ಲಿ ತೆಂಗು ಬೆಳೆಗಾರರ ಸೊಸೈಟಿಗಳನ್ನು ಮಾಡಿಕೊಂಡು ನೀರಾ ಶೇಖರಣೆ ಮಾಡುತ್ತಾರೆ. ಅದರ ಮುಖಾಂತರ ಬೆಲ್ಲ ಮಾಡತಕ್ಕದ್ದು, ಜೇನು ತಯಾರು ಮಾಡತಕ್ಕದ್ದು ಮತ್ತು ಇನ್ನೂ ಅನೇಕ ತಿಂಗಿಗಳನ್ನು ಮಾಡಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದನ್ನು ಉಪಯೋಗಿಸಿ ಇಡ್ಲಿ ತಯಾರು ಮಾಡತಕ್ಕದ್ದನ್ನು ನಾವು ನೋಡಿದ್ದೇವೆ. ಅದನ್ನು ಮಾಡಿ ಬೇರೆ ಬೈಪ್ರಾಡಕ್ಟ್ಸ್ ಏನು ಮಾಡಬಹುದು ಎನ್ನುವುದರ ಬಗ್ಗೆ ತಾವು ಏನು ಚಿಂತನೆ ಮಾಡಿದ್ದೀರಿ?

ಇದವರೆಗೂ ನೀವು ಚಿಂತನೆ ಮಾಡಿಲ್ಲವೆಂಬುದು ನನ್ನ ಅಭಿಪ್ರಾಯ. ಮತ್ತೆ ಎಷ್ಟರಮಟ್ಟಿಗೆ ನೀರಾವನ್ನು ಪ್ರಿಸರ್ವ್ ಮಾಡಬಹುದು, ಆಮೇಲೆ ಸೇಂದಿಯಾಗಿ ಪರಿವರ್ತನೆ ಮಾಡಿ ಎಷ್ಟು ಜನರಿಗೆ ಕೊಡಬಹುದು ಎನ್ನುವುದರ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಸೇಂದಿ ಎನ್ನುವುದು ಸಾರಾಯಿ ಮತ್ತು ಬೇರೆ ವಿಸ್ಕಿ ಇರಬಹುದು, ಬ್ರಾಂದಿ ಇರಬಹುದು, ಅದಕ್ಕಿಂತ ಆರೋಗ್ಯಕರವಾಗಿರತಕ್ಕಂಥ ದ್ರವ್ಯವೆಂದು ಹೇಳಿದ್ದಾರೆ. ಅದರಲ್ಲಿ ಶೇಕಡಾ 3ರಷ್ಟು ಮಾತ್ರ ಆಲ್ಕೋಹಾಲ್ ಇರುತ್ತದೆ. ಮತ್ತೆ ಉಳಿದ ಡ್ರಿಂಕ್ಸ್‌ಗಳಲ್ಲಿ 30ರಿಂದ 40 ಪರ್ಸೆಂಟ್ ಆಲ್ಕೋಹಾಲ್ ಇರುತ್ತದೆ. ಇವತ್ತು ನಮ್ಮಲ್ಲಿ ವಿದ್ಯಾವಂತರು ಉತ್ತಮವಾಗಿರತಕ್ಕಂಥ ಡ್ರಿಂಕ್ಸ್‌ನ್ನು ಕುಡಿಯುತ್ತಾರೆ. ಆದರೆ ಹಳ್ಳಿಗಳಲ್ಲಿ ತಮಗೆ ಗೊತ್ತಿದೆ, ಚುನಾವಣೆಗಳಲ್ಲಿ ನಿಜವಾದ ಅರಾಕ್‌ನ್ನು ಹಂಚುತ್ತಾರಾ? ಇದರ ಬಗ್ಗೆ ನಾವೆಲ್ಲರೂ ಕೂಡ ಯೋಚನೆ ಮಾಡೋಣ. ಡಿಸ್ಟಿಲರಿಯವರು ಎಲ್ಲಾ ರಾಜಕೀಯ ಪಕ್ಷಗಳಿಗೂ ಹಂಚುತ್ತಾರೆ. ಅದನ್ನು ಕೊಡಬೇಕಲ್ಲ ಎಂದು ಹೇಳಿ ಅದನ್ನು ರಾಜಕೀಯ ಪಕ್ಷಗಳು ತಂದು, ಅದಕ್ಕೆ ಏನೇನೋ ಬೆರೆಸಿ, ಬ್ಯಾಟರಿಸೆಲ್ ಮತ್ತು ಯಾವ್ಯಾವುದೋ ಕೆಟ್ಟ ಕೆಮಿಕಲ್ಸ್ ಹಾಕಿ, ನೀರಿಗೆ ಬೆರೆಸಿ ಚುನಾವಣೆ ಸಂದರ್ಭದಲ್ಲಿ ಹಂಚುತ್ತಾರೆ ಮತ್ತು ಇದರಿಂದ ಎಷ್ಟು ಜನರು ಸತ್ತಿದ್ದಾರೆ ಎನ್ನುವುದನ್ನು ನಾವು ನೋಡಿದ್ದೇವೆ. ನನ್ನ ಕ್ಷೇತ್ರದಲ್ಲಿ ಒಂದು ಚುನಾವಣೆಯಲ್ಲಿ ಒಬ್ಬ ಆ ಸಾರಾಯಿ ಕುಡಿದು ಸತ್ತುಹೋಗಿರತಕ್ಕಂಥ ನಿದರ್ಶನ ಇದೆ.

ಚೇರಮನ್: ಅದಕ್ಕೂ ನೀರಾಗೂ ಏನು ಸಂಬಂಧ ಇದೆ?

ಶ್ರೀ ಬಿ.ಸೋಮಶೇಖರ್: ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಸೇಂದಿಯನ್ನು ಸ್ವಲ್ಪ ಜನರು ಕುಡಿದರೆ ಏನು ತಪ್ಪಾಗುತ್ತದೆ? ಹಿಂದೆ ಸೇಂದಿಯಿಂದ ಎಷ್ಟು ಅನಾಹುತವಾಗಿದೆ? ಏನೋ ಸ್ವಲ್ಪಮಟ್ಟಿಗೆ ಕಲಬೆರಕೆಯಾಗಿರತಕ್ಕಂಥಾದ್ದನ್ನು ನಿಲ್ಲಿಸಿದ್ದೀರಿ. ಈ ಕಲಬೆರಕೆಯನ್ನು ಯಾವರೀತಿ ತಪ್ಪಿಸಬಹುದು? ಇದನ್ನು ತಾವು ಚಿಂತನೆ ಮಾಡಬಹುದೇ ಹೊರತು, ಈ ಸೇಂದಿಯೇ ಸರಿಯಲ್ಲವೆಂದು ನಿಲ್ಲಿಸತಕ್ಕಂತಾದ್ದು ಸರಿಯಲ್ಲ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಉಡುಪಿಯಲ್ಲಿ ಮತ್ತು ನಾರ್ತ್ ಕೆನರಾದಲ್ಲಿ ಸೇಂದಿಯನ್ನು ಎಷ್ಟು ಜನ ಕುಡಿಯುತ್ತಿದ್ದಾರೆ. ಅದರಿಂದ ಎಷ್ಟು ಜನರ ಆರೋಗ್ಯ ಕೆಟ್ಟಿದೆ. ಎಷ್ಟು ಜನಕ್ಕೆ ಉದ್ಯೋಗ ಸಿಕ್ಕಿದೆ. ಅದರಿಂದ ಏನೇನು ಬೈಪ್ರಾಡಕ್ಟ್ಸ್ ಮಾಡಿದ್ದಾರೆ. ಅದನ್ನಾದರೂ ನೀವು ಪ್ರಾಯೋಗಿಕವಾಗಿ ತೆಗೆದುಕೊಂಡು, ಬೇರೆ ಜಿಲ್ಲೆಗಳಿಗೆ ತಾವೇಕೆ ಅವಕಾಶ ಕೊಡಬಾರದು. ಅದರಿಂದ ಎರಡು ಮೂರು ಅನುಕೂಲಗಳು ಆಗುತ್ತವೆ. ಆರೋಗ್ಯ ದೃಷ್ಟಿಯಿಂದಲೂ ಸೇಂದಿ, ಬೇರೆ ಸಾರಾಯಿಗಿಂತ ಉತ್ತಮವಾದಂಥ ಲಿಕ್ಕರ್ ಎಂದು ಗೊತ್ತಾಗುತ್ತದೆ. ಇದನ್ನು ಬೈಪ್ರಾಡಕ್ಟ್ಸ್ ಮಾಡುವುದರಿಂದ ಅನುಕೂಲವಾಗಬಹುದು. ಇವತ್ತು ರೈತನಿಗೆ ನಿಮ್ಮ ಔಷಧಿಗಳಿಂದ ಯಾವುದೇ ಒಂದು ಸಮಾಧಾನಕರವಾದಂಥ ಅಭಿಪ್ರಾಯ ಇಲ್ಲ. ಏಕೆಂದರೆ, ಮೂರೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮಾನೋಕ್ರೋಟೋಫಾಸ್ ಮತ್ತು ಬಬಿಕೋಫಾಸ್

ಏನು ಸಿಂಪಡಣೆ ಮಾಡಿದ್ದೀರಿ ಅದರಿಂದ ದುಷ್ಪರಿಣಾಮಗಳಾಗಿವೆಯೇ ಹೊರತು ಯಾವುದೇ ರೀತಿಯ ಒಳ್ಳೆಯ ಪರಿಣಾಮ ಆಗಿಲ್ಲ. ಇವತ್ತು ಈ ವರ್ಷ ನೀವೇನು ಒಂಬತ್ತು ಕೋಟಿ ರೂ.ಗಳನ್ನು ಇಟ್ಟುಕೊಂಡಿದ್ದೀರಿ ಈ ಹಣ ನನ್ನ ದೃಷ್ಟಿಯಲ್ಲಿ ಖರ್ಚಾಗತಕ್ಕಂತಾದ್ದು, ರೈತನಿಗೆ ಯಾವುದೇ ರೀತಿ ತಲುಪುವುದಿಲ್ಲ. ಈ ಪೆಸ್ಟಿಸೈಡ್ಸ್ ಮ್ಯಾನುಫ್ಯಾಕ್ಚರ್ಸ್ ಇದ್ದಾರಲ್ಲಾ, ಅವರಿಗೆ ಅನ್ಯಾಯವಾಗಿ ನೀವು ಹಣವನ್ನು ಸುರಿಯುತ್ತೀರಿ. ರೈತ ಅದನ್ನು ಒಪ್ಪಿಕೊಳ್ಳುವುದೂ ಇಲ್ಲ, ಮತ್ತು ಅದರಿಂದ ಪ್ರಯೋಜನವೂ ಆಗುವುದಿಲ್ಲ. ನನ್ನ ಸಲಹೆ ಏನೆಂದರೆ, ಆ ದುಡ್ಡನ್ನು ಬೇರೆ ಒಳ್ಳೆಯದಕ್ಕೆ ಉಪಯೋಗಿಸಿಕೊಂಡು, ರೀಸರ್ಚ್‌ಗೋಸ್ಕರ ಮತ್ತು ಅದರಿಂದ ಬೈಪ್ರಾಡಕ್ಸ್ ಯಾವ ಯಾವ ರೀತಿ ಮಾಡಬಹುದು ಎಂಬುದಕ್ಕೆ ಖರ್ಚು ಮಾಡಿದರೆ ಅನುಕೂಲವಾಗುತ್ತದೆಂಬುದು ನನ್ನ ಅಭಿಪ್ರಾಯ. ಇವತ್ತು ರೈತರಲ್ಲಿ ಒಂದು ಅಭಿಪ್ರಾಯ ಬಂದಿದೆ. ಏಕೋ ಸರ್ಕಾರ ಬಹಳ ಮೀನಾಮೇಷ ಎಣಿಸುತ್ತಾ ಇದೆ, ಅನುಮತಿ ಕೊಡುತ್ತಾ ಇಲ್ಲ, ಇದರಲ್ಲಿ ಏನೋ ಇದೆ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡುತ್ತಾ ಇದೆ. ನಾವು ಅನೇಕ ಸಭೆಗಳಲ್ಲಿ ಭಾಗವಹಿಸಿದ್ದೇವೆ, ಮಾತನಾಡಿದ್ದೇವೆ, ಜನ ನಮ್ಮನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ನೀವೇನು ಮಾಡುತ್ತಿದ್ದೀರಿ, ನೀವು ವಿಧಾನ ಸಭೆಯಲ್ಲಿ ಇದನ್ನು ಕೇಳಬೇಕು. ಸರ್ಕಾರದವರು ಯಾರದೋ ಒತ್ತಡಕ್ಕೆ ಮಣಿಯುತ್ತಿದ್ದಾರೆ. ಆ ಒತ್ತಡಕ್ಕೆ ಮಣಿದು, ರೈತರ ಕಷ್ಟಕ್ಕೆ ಬರುತ್ತಾ ಇಲ್ಲ. ಇದಕ್ಕೆ ಹೋರಾಟ ಮಾಡಬೇಕೆಂದು ಅವರು ಇವತ್ತು ಬೀದಿಗಿಳಿದಿದ್ದಾರೆ. ಇವತ್ತು ಎಷ್ಟೋ ಜನ ಅರೆಸ್ಟ್ ಆಗಿದ್ದಾರೆ. ಆದರೂ, ನೀವು ಕಳೆದ ನಾಲ್ಕೈದು ತಿಂಗಳಿಂದ ಸುಮ್ಮನೆ ಕುಳಿತಿದ್ದೀರಲ್ಲಾ ಎಂದು ಕೇಳುತ್ತಾರೆ. ಆದ್ದರಿಂದ, ಈ ಸರ್ಕಾರ ಸಮಸ್ಯೆಯನ್ನು ತೀವ್ರಗತಿಯಿಂದ ತೆಗೆದುಕೊಂಡಿಲ್ಲವೆಂಬುದು ನನ್ನ ಅಭಿಪ್ರಾಯ. ಇದನ್ನು ಅರಿತು, ಮಾನ್ಯ ಬೈರೇಗೌಡರು ಅಧ್ಯಕ್ಷರಾಗಿರತಕ್ಕಂಥ ವಿಷಯ ಸಮಿತಿಯವರು ಒಂದು ವರದಿ ಕೊಟ್ಟಿದ್ದಾರೆ. ಅದರಲ್ಲಿ ನಿಮ್ಮ ಪಕ್ಷದವರೂ ಇದ್ದಾರೆ, ಎಲ್ಲಾ ಪಕ್ಷದವರೂ ಇದ್ದಾರೆ. ಆ ವಿಷಯ ಸಮಿತಿಯವರು ಕೊಟ್ಟಂಥ ಶಿಫಾರಸ್ಸನ್ನೂ ಏಕೆ ಗಮನಕ್ಕೆ ತೆಗೆದುಕೊಳ್ಳಬಾರದು? ನಿಮ್ಮ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡಿದ್ದರೂ ಈ ಸದನದಲ್ಲಿ ಆಗಿರತಕ್ಕ ಚರ್ಚೆಯ ಆಧಾರದ ಮೇಲೆ, ಹೊರಗಡೆ ಸಾರ್ವಜನಿಕರು ಈ ವಿಚಾರದಲ್ಲಿ ಪ್ರತಿಭಟನೆ ಮಾಡತಕ್ಕಂಥ ಹಿನ್ನೆಲೆಯಲ್ಲಿ ಮತ್ತು ನಿಮ್ಮ ಸರ್ಕಾರಕ್ಕೇನಾದರೂ ಸ್ವಲ್ಪ ಸಾರ್ವಜನಿಕರ ಬಗ್ಗೆ ಕಳಕಳಿ ಇದೆಯೆನ್ನುವುದಾದರೆ ಇದನ್ನು ಪುನರ್ ಪರಿಶೀಲನೆ ಮಾಡಿ ನೀರಾ ಇಳಿಸತಕ್ಕಂಥಾದ್ದಕ್ಕೆ ಅನುಮತಿ ಕೊಡಬೇಕು. ಅದರಿಂದ ಯಾವ ಯಾವ ರೀತಿ ಉಪಯೋಗ ಪಡೆಯಬೇಕು, ಹೇಗೆ ಪ್ರಿಸರ್ವ್ ಮಾಡಬೇಕು ಮತ್ತು ಅದನ್ನು ಸೇಂದಿ ರೂಪದಲ್ಲಾದರೂ ಬಡವರು ಕುಡಿಯುವುದಕ್ಕೆ ಅವಕಾಶವಾಗಲಿ, ಈ ಎಲ್ಲಾ ದೃಷ್ಟಿಯಿಂದ ಸರ್ಕಾರದವರು ಯೋಗ್ಯ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ(ಕೋಲಾರ): ಮಾನ್ಯ ಅಧ್ಯಕ್ಷರೇ, ತೆಂಗು ಎಂದರೆ

ಕಲ್ಪವೃಕ್ಷ. ನಮ್ಮ ಸಮಾಜದಲ್ಲಿ ಅದನ್ನು ದೇವರು ನೋಡಿದ ಹಾಗೆ ನೋಡುತ್ತಾರೆ. ನಾವೆಲ್ಲಾ ಚಿಕ್ಕಮಕ್ಕಳಾಗಿದ್ದಾಗ ಬೆಳಿಗ್ಗೆ ಎದ್ದಕೂಡಲೇ ನಮ್ಮ ತಾಯಿಯವರು, ನಾವಿನ್ನೂ ಕಣ್ಣು ಮುಚ್ಚಿಕೊಂಡಿದ್ದರೂ, ಕಣ್ಣುಬಿಡಿಸಿ ಎತ್ತಿಕೊಂಡು ಬಂದು ತೆಂಗಿನ ಮರವನ್ನು ತೋರಿಸುತ್ತಿದ್ದರು. ಇಷ್ಟು ಆ ಕಲ್ಪವೃಕ್ಷದ ಮೇಲೆ ನಮ್ಮ ಸಮಾಜದಲ್ಲಿರುವಂಥ ಹೆಗ್ಗಳಿಕೆ ಮತ್ತು ನಂಬಿಕೆ. ಇವತ್ತು ಈ ಪರಿಸ್ಥಿತಿಯಲ್ಲಿ ಯಾವ ರೀತಿಯಾಗಿ ಮನುಷ್ಯನಿಗೆ ಕ್ಯಾನ್ಸರ್ ಬಂದರೆ ನೂರಕ್ಕೆ ತೊಂಬತ್ತೊಂಬತ್ತು ಪರ್ಸೆಂಟ್ ಬದುಕುವುದಿಲ್ಲವೋ, ತೆಂಗಿನ ಮರಗಳಿಗೆ ನುಸಿ ಬಂದು ಅದೇ ತರಹದ ಪರಿಸ್ಥಿತಿ ಇವತ್ತು ಆಗಿರುತ್ತದೆ. ಇಷ್ಟೆಲ್ಲಾ ಚರ್ಚೆಯೇ ಬೇಡ. ಈ ಸರ್ಕಾರ ಬಂದು ಸ್ವಲ್ಪ ಹೆಚ್ಚು ಕಡಿಮೆ ಎರಡು ವರ್ಷಗಳಾಯಿತು. ಮಾಲೂರಿನಲ್ಲಿ ಕಾಣಿಸಿಕೊಂಡ ಲಾಗಾಯ್ತು, ನೀವು ಬಂದ ಮೇಲೆ ಏನೇನು ಪ್ರಯೋಗಗಳನ್ನು ಮಾಡಿದ್ದೀರಿ, ಎಷ್ಟು ಪರ್ಸೆಂಟ್ ನುಸಿ ರೋಗವನ್ನು ನೀವು ನಿಯಂತ್ರಣ ಮಾಡಿದ್ದೀರಿ? ನೀವು ಈ ಎರಡು ವರ್ಷಗಳಲ್ಲಿಯೂ ಮಾಡುವುದಕ್ಕಾಗದೇ ಕನಿಷ್ಟ ನಮಗೆ ನೀರಾ ಇಳಿಸುವುದಕ್ಕಾದರೂ ಅವಕಾಶ ಮಾಡಿಕೊಡಿ. ಇಲ್ಲವೇ ಇದನ್ನು ನಿಯಂತ್ರಣ ಮಾಡಿ. ಈಗಾಗಲೇ ಮಾನ್ಯ ಹನುಮೇಗೌಡರು ಹೇಳಿದ ಹಾಗೆ, ಇದರಿಂದ ಬಡವ ಬಗ್ಗರನ್ನು ಶೋಷಣೆ ಮಾಡಬೇಕು, ಅವರಿಗೆ ಅನ್ಯಾಯ ಮಾಡಬೇಕು ಎನ್ನುವ ಅನಿಸಿಕೆ, ಯಾವುದೇ ತೆಂಗು ಬೆಳೆಯುವ ರೈತನಿಗೆ ಇಲ್ಲ. ಆದರೆ, ನಮ್ಮ ಅಳಿವು-ಉಳಿವುಗಳನ್ನೂ ಕೂಡ ನೀವು ನೋಡಬೇಕು. ನವಾಸಾಗರ ಹಾಕಿ, ಯೂರಿಯಾ ಹಾಕಿ ಸಾರಾಯಿ ಮಾಡುವಂಥಾದ್ದಕ್ಕೆ ನೀವು ಅವಕಾಶ ಕೊಡುತ್ತೀರಿ. ಚಪ್ಪಲಿಗಳನ್ನು ಹಾಕಿ ಸಾರಾಯಿ ಕಾಯಿಸುತ್ತಾರೆ. ಸ್ವಾಮಿ, ನಾನು ಕಣ್ಣಾರೆ ನೋಡಿರುವುದನ್ನು ಹೇಳುತ್ತಿದ್ದೇನೆ. ಬ್ಯಾಟರಿಸೆಲ್ ಹಾಕಿ ಸಾರಾಯಿ ಕಾಯಿಸುತ್ತಾರೆ. ಇವತ್ತು ಇಲ್ಲಿಸಿಟ್ ಲಿಕ್ಕರನ್ನು, ಸಾರಾಯಿ ಮಾಡುವುದನ್ನು ನೀವೇನು ನಿಲ್ಲಿಸಿದ್ದೀರಾ? ಈ ಪರಿಸ್ಥಿತಿ ಇವತ್ತೂ ಕೂಡ ಹಳ್ಳಿಗಾಡುಗಳಲ್ಲಿ ಇದೆ. ಆದರೆ, ಈ ಕಲ್ಪವೃಕ್ಷದಲ್ಲಿ ಬರುವಂಥ ನೀರಾವನ್ನು ಕೊಟ್ಟು, ಈ ನುಸಿ ರೋಗವನ್ನು ತಡೆಗಟ್ಟಿ ಎಂದರೆ ಆಗುವುದಿಲ್ಲವೆಂದು ಹೇಳುತ್ತೀರಿ. ನಮ್ಮ ವ್ಯವಸಾಯ ಇಲಾಖೆ ಮಂತ್ರಿಗಳು ಮೊದಲು ಒಂದು ಕೋಟಿ ಮರಗಳು ಎಂದರು. ಈಗ ಅದು ಆರು ಕೋಟಿ, ಏಳು ಕೋಟಿ ಎಂದು ಮೇಲಕ್ಕೆ ಏರುತ್ತಲೇ ಇದೆ. ಈ ಅಂಕಿ ಅಂಶಗಳೂ ನಿಮ್ಮಲ್ಲಿ ಇಲ್ಲವೇ? ನೀವು ಇದನ್ನು ಪತ್ತೆ ಹಚ್ಚಿಲ್ಲವೇ? ರಾಜ್ಯದಲ್ಲಿ ಎಷ್ಟು ಮರಗಳು ಇವೆ ಎಂಬುದು ಇವತ್ತು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಇದನ್ನೂ ಕೂಡ ನೀವು ಅರ್ಥ ಮಾಡಿಕೊಳ್ಳಬೇಕು. ಇವತ್ತು ಅರ್ಧ ಭಾಗದಷ್ಟು ತೆಂಗಿನ ಮರಗಳು ಸೌತ್-ಕೆನರಾ ಮತ್ತು ನಾರ್ತ್-ಕೆನರಾದಲ್ಲಿ ಇದೆ. ಅಲ್ಲಿ ರೋಗ ಕಡಿಮೆ, ಕಾರಣ ಏನೆಂದರೆ ಅಲ್ಲಿ ಮಳೆ ಜಾಸ್ತಿ ಬೀಳುತ್ತದೆ. ಜೊತೆಗೆ ಬಿಸಿಲು ಅಷ್ಟೇ ಜಾಸ್ತಿ ಇರುತ್ತದೆ. ಹಾಗಾಗಿ ಅಲ್ಲಿ ಈ ನುಸಿ ರೋಗ ಬರುವುದು ಕಡಿಮೆಯಾಗಿದೆ. ಆದರೆ, ಬೇರೆ ಭಾಗದಲ್ಲಿ ನುಸಿರೋಗ ಬಂದಿದೆ. ಇದರಲ್ಲಿ ಎಷ್ಟು ಪರ್ಸೆಂಟ್ ನೀರಾ ಮಾಡುತ್ತೀರೋ, ಸೇಂದಿ ಮಾಡುತ್ತೀರೋ ಅದನ್ನು ನಿರ್ಧರಿಸಿ. ಆಗಲೇ ಮಾನ್ಯ ಸೋಮಶೇಖರ್‌ರವರು ಬಹಳ ಚೆನ್ನಾಗಿ ಹೇಳಿದರು. ಇಂತಹ ನವಾಸಾಗರ, ಯೂರಿಯಾ, ಮತ್ತು ಚಪ್ಪಲಿಗಳನ್ನು ಹಾಕಿ, ಕಾಯಿಸಿದ್ದನ್ನು ಆ ಬಡ ಜನರು ಕುಡಿದು ಸಾಯುವುದಕ್ಕಿಂತ ಇದು ಮರದಿಂದ ಬರತಕ್ಕ ಸೇಂದಿ. ನೀವು ಅಬಕಾರಿ

ಮಸೂದೆಯನ್ನು ತಿದ್ದುಪಡಿ ಮಾಡಿ. ಇದನ್ನು ಸಾರಾಯಿ ಬದಲು ಸೇಂದಿಯಾಗಿ ಕೊಡಿ. ಇದು ಏತಕ್ಕಾಗಿ ಆಗುವುದಿಲ್ಲ? ಇದು ಇವತ್ತು ನಮಗೆ ಬಂದಿರುವುದು. ನಾವೇನೂ ನೀರಾ ಕೊಡಿಸಿಬಿಡಬೇಕು, ಸೇಂದಿ ಕೊಡಿಸಬೇಕೆಂದು ನಾನು ಹೇಳುವವನಲ್ಲ. ನಾವು ಕಳೆದ ಎರಡು ವರ್ಷಗಳಿಂದ ಕೇಳುತ್ತಲೇ ಬಂದಿದ್ದೇವೆ. ನಮಗೆ ಈ ನುಸಿ ರೋಗ ಬಂದಿದೆ, ಇದನ್ನು ನಿಯಂತ್ರಣ ಮಾಡಿ ಎಂದು ಹೇಳಿದ್ದೇವೆ. ಆದರೆ, ಅದು ಆಗಲಿಲ್ಲ. ಕನಿಷ್ಠ ಇದನ್ನು ಪ್ರಯತ್ನ ಮಾಡಿ, ಇದರಲ್ಲಿ ತಪ್ಪೇನಿದೆ? ನೀವು ಪ್ರಯತ್ನ ಮಾಡಿ ಇಷ್ಟರವರೆಗೆ ನಿಂತಿದ್ದರೆ, ಇಲ್ಲಿ ನಾವ್ಯಾರೂ ಕೇಳುತ್ತಲೇ ಇರಲಿಲ್ಲ. ನುಸಿ ರೋಗ ನಿಂತಿದೆ ನೀರಾ ತೆಗೆಯಕೂಡದು ಎಂದು ನಾವು ಹೇಳುವವರು. ಇವತ್ತು ಈ ಪರಿಸ್ಥಿತಿ ಇದೆ, ನಾವೇನು ಮಾಡಬೇಕು? ನನ್ನ ಸ್ವಂತ ಅನುಭವ. ನಾನು ಆರು ಸಾರಿ ಮಾನೋಕ್ರಾಟೋಫಾಸ್ ಕೊಡಿಸಿದ್ದೇನೆ. ಮೂರು ಸಾರಿ ಸಿಂಪಡಣೆ ಮಾಡಿಸಿದ್ದೇನೆ. ಮೊನ್ನೆ 10 ದಿವಸಗಳ ಹಿಂದೆ ಕೂಡ ಸಿಂಪಡಣೆ ಮಾಡಿಸಿದ್ದೇನೆ. ಇದಲ್ಲದೆ, ಎಲ್ಲಾ ಗರಿಗಳನ್ನು ಕತ್ತರಿಸಿಬಿಟ್ಟಿದ್ದೇನೆ. ನಾನು ಎರಡು ತೋಟದಲ್ಲಿ ಸುಮಾರು 700 ಗಿಡಗಳಲ್ಲಿ ಈ ಕೆಲಸವನ್ನು ಮಾಡಿದ್ದೇನೆ. ಸ್ವಾಮಿ, ನೀವು ಬೇಕಾದರೆ ನಮ್ಮ ತೋಟಕ್ಕೆ ಬನ್ನಿ, ಕಣ್ಣಲ್ಲಿ ನೀರು ಬರುತ್ತದೆ. ಇವತ್ತು ಮತ್ತೆ ರೋಗ ಬಂದಿದೆ. ನಿಮ್ಮ ಯಾವುದೇ ಔಷಧಿಗಳಿಂದ ಇವತ್ತಿನವರೆಗೂ ನಿಯಂತ್ರಣವಾಗಲಿಲ್ಲ. ಮಧ್ಯದಲ್ಲಿ ಬೆಳೆದ ಬಾಳೆಯನ್ನು ಕತ್ತರಿಸಿ, ಸುಟ್ಟು ಹಾಕಿದ್ದರೂ ಕೂಡ ತಿರುಗಿ ಬಂದಿದೆ. ಈಗಾಗಲೇ ಮಾನ್ಯ ಸದಸ್ಯರಾದ ಮಹದೇವಪ್ರಸಾದ್‌ರವರು ಒಳ್ಳೆಯ ಪ್ರಸ್ತಾಪ ಮಾಡಿದರು. ಇವತ್ತು ಎಲ್ಲಾ ತೆಂಗಿನ ಮರಗಳನ್ನು ಕಡಿದುಬಿಡಿ. ಅದಕ್ಕೆ ಸಬ್ಸಿಡಿ ಎಂದು ಕೊಟ್ಟುಬಿಡಿ. ನಾವು ಅದಕ್ಕೂ ಸುಮ್ಮನೆ ಇರುತ್ತೇವೆ. ಇವತ್ತು ಕೋಲಾರ ಜಿಲ್ಲೆಯಲ್ಲಿ ಜೆ.ಸಿ.ಬಿ. ತೆಗೆದುಕೊಂಡು ಹೋಗಿ ಎಷ್ಟೋ ಮರಗಳನ್ನು ತಳ್ಳಿದ್ದಾರೆ. ತೋಟಗಳನ್ನು ಕ್ಲೀನ್ ಮಾಡಿಬಿಟ್ಟರು. ನಮ್ಮಲ್ಲಿ ಬೇರೆ ಕಡೆ ಇದ್ದ ಹಾಗೆ ಅದನ್ನು ಕಾಯುವುದಿಲ್ಲ. ಆ ಜಾಗದಲ್ಲಿ ರೇಷ್ಮೆಯನ್ನೋ ಮತ್ತೊಂದನ್ನೋ ಹಾಕಿಕೊಂಡು ಜೀವನ ಮಾಡೋಣವೆಂದು ಹೋಗುತ್ತಿದ್ದಾರೆ. ಇದು ಇವತ್ತು ಬಂದಿರುವಂಥ ವ್ಯವಸ್ಥೆ. ಇವತ್ತು ಮರ ಬೆಳೆಸಿ, ಅದಕ್ಕೆ ನೀರು ಕಟ್ಟಿ ಎಷ್ಟು ಶ್ರಮಪಟ್ಟಿರುತ್ತಾರೆ. ಇದು ಬೇರೆ ಗಿಡ ಬೆಳೆಸಿದ ಹಾಗೆ ಅಲ್ಲ ಮಾವೋಗೀವೋ ಹಾಕಿದರೆ ಅದಕ್ಕೆ ನೀರು ಕಟ್ಟಬೇಕಾಗಿಲ್ಲ, ಮಳೆ ಬಂದರೆ ಸಾಕಾಗುತ್ತದೆ ಇದಕ್ಕೆ, ಮೂರು ದಿವಸಕ್ಕೊಮ್ಮೆ ನೀರು ಕೊಡುತ್ತಾ ಇದ್ದರೆ ಮಾತ್ರ ಮರ ಬರುತ್ತದೆ. ಈ ಭಾಗದಲ್ಲಿ ಅಂದರೆ, ಬೆಂಗಳೂರು ಗ್ರಾಮಾಂತರ, ಕೋಲಾರ ತುಮಕೂರು ಕಡೆಗಳಲ್ಲಿ ತಿಪಟೂರು ಭಾಗದಲ್ಲಿ ಹಾಗೆಯೇ ಬರಬಹುದು. ಈ ಪರಿಸ್ಥಿತಿ ಇದ್ದಾಗಲೂ ಸಹ ನಾವು ತೆಂಗಿನ ಮರವನ್ನು ಬೆಳೆಸಿ, ದೊಡ್ಡ ಮರಗಳಾಗಿರುವಾಗ ಇವತ್ತು ಜೆ.ಸಿ.ಬಿ. ತೆಗೆದುಕೊಂಡು ಹೋಗಿ ತಳ್ಳಬೇಕೆಂದು ಹೇಳಿದರೆ, ಆ ರೈತನ ಪ್ರಾಣ ಹೇಗಿರಬೇಕು ಹೇಳಿ. ಅವನು ರೈತನಾಗಿ ಏಕೆ ಹುಟ್ಟಬೇಕು, ಅವನ ಮನಸ್ಸಿನಲ್ಲಿ ಏನಾಗಬಹುದು. ಇದನ್ನು ನಾವು ಚಿಂತನೆ ಮಾಡಬೇಕಾಗಿದೆ. ನೀರಾ ಇಳಿಸಲೇಬೇಕು, ಬಿಡಲೇಬೇಕು ಎನ್ನುವಂತಾದ್ದು ಏನಿಲ್ಲ. ಮಾಲೂರಿನಲ್ಲಿ ಪ್ರಾರಂಭವಾದಂಥ ಈ ರೋಗ, ಎರಡು ವರ್ಷಗಳಾದರೂ ಕೂಡ ನಿಯಂತ್ರಣ ಮಾಡಲಿಲ್ಲ. ಈ ಎರಡು ವರ್ಷಗಳಿಂದ ಎಷ್ಟು ಮರಗಳು ನಷ್ಟವಾಯಿತು, ಎಷ್ಟು ಬೆಳೆ ಕಡಿಮೆಯಾಯಿತು. ಇದರ ಬಗ್ಗೆ

ನಿಮ್ಮ ಹತ್ತಿರ ವೈಜ್ಞಾನಿಕವಾದ ಮಾಹಿತಿಗಳೇನಾದರೂ ಇದೆಯೇ? ಈ ರೀತಿ ಒಂದಕ್ಕೊಂದು ಪ್ರಶ್ನೆ ಮಾಡಿಕೊಂಡು ಹೋದಾಗ, ನಾವು ಎಲ್ಲೋ ಒಂದು ಜಾಗದಲ್ಲಿ ನಿಲ್ಲಲೇಬೇಕಾಗುತ್ತದೆ. ಆ ನಿಲ್ಲುವಂಥ ಪರಿಸ್ಥಿತಿ, ನೀರಾ ಅಥವಾ ಸೇಂದಿ ಮಾಡುವುದರ ಮೂಲಕ ಈ ತೆಂಗು ಬೆಳೆಯುವಂಥ ರೈತರಿಗೆ ಸಹಾಯ ಮಾಡಬೇಕೆಂಬುದೇ ನಮ್ಮ ಕೂಗು. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ(ಶ್ರೀರಂಗಪಟ್ಟಣ): ಮಾನ್ಯ ಅಧ್ಯಕ್ಷರೇ, ತೆಂಗಿನ ಮರದಿಂದ ನೀರಾ ಇಳಿಸುವ ಬಗ್ಗೆ ನಮ್ಮ ವಿರೋಧಪಕ್ಷದ ಸದಸ್ಯರು ಮಾತನಾಡುತ್ತಿದ್ದಾರೆ. ಆದರೆ ನನಗೊಂದು ಆತಂಕ ಏನೆಂದರೆ ತೆಂಗಿನ ಮರದ ಬುಡದಿಂದ ಹಿಡಿದು ತಲೆವರೆಗೂ ನುಸಿ ರೋಗಪೀಡಿತವಾಗಿದೆ. ಆದ್ದರಿಂದ ನಾನು ಹೇಳುವುದೇನೆಂದರೆ ಈ ನುಸಿ ರೋಗ ಇರುವ ತೆಂಗಿನ ಮರಗಳಿಂದ ನಾವು ನೀರಾ ಇಳಿಸುವಾಗ ಆ ರೋಗ ಈ ನೀರಾಗೆ ಬರುವುದಿಲ್ಲವೇ? ಆಗ ಜನರು ನೀರಾ ಕುಡಿದು ಅಥವಾ ಸೇಂದಿ ಕುಡಿದು ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೇ? ಈ ಬಗ್ಗೆ ವೈಜ್ಞಾನಿಕವಾಗಿ ತಪಾಸಣೆಯಾಗಿದೆಯೇ? ಎಲ್ಲಿ ತೆಂಗಿನ ಮರಗಳಿಗೆ ರೋಗ ಬಂದಿದೆಯೋ ಅಲ್ಲಿ ನೀರಾ ಇಳಿಸಬಹುದೇ? ಏಕೆಂದರೆ ಕೋಳಿಗೆ ರೋಗ ಬಂದರೆ ಆ ಕೋಳಿಯನ್ನು ಯಾರೂ ತಿನ್ನುವುದಿಲ್ಲ.

ಛೇರ್ಮನ್: ಮಾನ್ಯ ಸದಸ್ಯರು ನುಸಿರೋಗದಿಂದ ನೀರಾ ತೆಗೆದರೆ ಮನುಷ್ಯರಿಗೆ ಖಾಯಿಲೆ ಬರುವುದಿಲ್ಲವೇ ಎಂದು ಹೇಳುತ್ತಿದ್ದೀರಿ. ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸುತ್ತಾರೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಮಾನ್ಯ ಅಧ್ಯಕ್ಷರೇ, ನುಸಿ ಬರುವುದು ಯಾವಾಗ? ಹೂವು ಆಗಿ ಸಣ್ಣಪಿಂದೆ ಬರುವಾಗ ತೆಂಗಿನ ಮರಗಳಿಗೆ ನುಸಿ ಬರುವುದು. ಮಾನ್ಯ ಸದಸ್ಯರು ಅದನ್ನು ಅರ್ಥ ಮಾಡಿಕೊಂಡಿಲ್ಲ. ಅದಕ್ಕೆ ಮೊದಲೇ ಹೊಂಬಾಳೆ ಬಂದಾಗ ನಾವು ನೀರಾ ಇಳಿಸಿದರೆ ಆ ನುಸಿ ಹೋಗುತ್ತದೆ. ಅದು ಒಳಗಡೆಯಿಂದ ಬರುವುದಿಲ್ಲ. ಮೇಲಗಡೆಯಿಂದ ಬಂದು ಅದು ಇನ್‌ಸೆಕ್ಟ್ ಆಗುವುದು. ಈ ಹೊಂಬಾಳೆಯಲ್ಲಿರುವ ಪಿಂದೆಗಳನ್ನು ಸಕ್ ಮಾಡುವುದಕ್ಕೆ ಬರುವಂತಹ ಹುಳ ಅದು. ಅದು ಮರದ ಒಳಗಡೆ ಹೋಗುವುದಿಲ್ಲ. ಮರದ ಆಚೆ ಬರುವಂತಹ ರೋಗ. ಇವತ್ತು ಮಾನೋಕ್ರೋಟೋಫಾಸ್ ಕೊಟ್ಟರೂ ಕೂಡ ಈ ರೋಗ ನಿಂತಿಲ್ಲ. ಸ್ವಾಮಿ, ಕೇರಳದಲ್ಲಿ ಕೂಡ ಈ ರೋಗ ಇದೆ ಕೆಲವು ಭಾಗದಲ್ಲಿ. ಅವರು ಇವತ್ತಿನವರೆಗೂ 30 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಅವರು ಇದೇ ತರಹದ ಔಷಧಿಯನ್ನು ಹಾಕಿದರೂ ಸಹ ಕಂಟ್ರೋಲ್ ಆಗಿಲ್ಲ. ಇವತ್ತು ಕಂಟ್ರೋಲ್ ಮಾಡಬೇಕಾದಂತಹ ಪರಿಸ್ಥಿತಿಗೆ ನೀವು ಬರುತ್ತೀರಾ? ತಾವು ಬೇಕಾದರೆ ಇನ್ನೂ ಮೂರು ತಿಂಗಳು ಟೈಮ್ ತೆಗೆದುಕೊಳ್ಳಿ. ನೀವು ಮಾಡುತ್ತೀರಾ? ನಿಮಗೆ ನಂಬಿಕೆ ಇದೆಯೇ? ಈ ನುಸಿ ರೋಗವನ್ನು ಮೂರು ತಿಂಗಳೊಳಗಾಗಿ ನಮ್ಮ ರಾಜ್ಯದಲ್ಲಿ ರೋಗರಹಿತ ತೆಂಗಿನ ಗಿಡ

ಮಾಡುತ್ತೇವೆಂದು ಹೇಳಿದರೆ ನಮಗೆ ನೀರಾ ಬೇಡ ಸೇಂದಿ ಬೇಡ. ನಮಗೆ ತೆಂಗಿನ ಮರ ಬೇಕು, ತೆಂಗಿನ ಕಾಯಿಬೇಕು, ನಾವು ಬೇಡವೆಂದು ಹೇಳುವುದಿಲ್ಲ. ಆದರೆ ತಾವು ಎರಡು ವರ್ಷಗಳಿಂದ ಮಾಡಲು ಸಾಧ್ಯವಾಗದೇ ಇರುವಂತಹ ಕೆಲಸವನ್ನು ಇನ್ನೂ ಎಷ್ಟು ವರ್ಷ ಸಾಗಿಸಿಕೊಂಡು ಹೋಗುತ್ತೀರಿ? ಇದು ನಮಗೆ ಇರುವಂತಹ ಆತಂಕ. ಯಾವುದೇ ಸರ್ಕಾರ ಈ ನುಸಿ ರೋಗವನ್ನು ತಡೆಹಿಡಿಯಲಿಲ್ಲ. ಅದಕ್ಕೋಸ್ಕರವಾಗಿ ಈ ಪ್ರಯತ್ನ ಮಾಡಲು ರೈತರು ಮುಂದಾಗಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ(ಕೃಷಿ ಸಚಿವರು): ಮಾನ್ಯ ಸದಸ್ಯರು ನೀರಾ ಬಗ್ಗೆ ಬಹಳ ಪ್ರತಿಪಾದನೆ ಮಾಡುತ್ತಿದ್ದಾರೆ. ತಾವು ಶಾಸಕರು ಮತ್ತು ಅತ್ಯಂತ ಪ್ರತಿಷ್ಠವಾಗಿರತಕ್ಕಂಥ ಒಂದು ಸಂಸ್ಥೆ ಮತ್ತು ಈ ತೆಂಗು ಬೆಳೆಗಾರರ ಯೋಗಕ್ಷೇಮಕ್ಕೆ ಇರತಕ್ಕಂಥ ನೆಫೆಡ್ ಸಂಸ್ಥೆಯ ನಿರ್ದೇಶಕರೂ ಸಹ ತಾವು. ತಮ್ಮ ಸಂಸ್ಥೆ ಎಷ್ಟರಮಟ್ಟಿಗೆ ರೈತರ ಸಹಾಯಕ್ಕೆ ಬಂತು ಎನ್ನುವ ಬಗ್ಗೆ ತಾವು ಹೇಳಿದರೆ ಆಮೇಲೆ ನಾವು ಉತ್ತರ ಹೇಳುವುದಕ್ಕೆ ಸರಿ ಹೋಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ: ಕುದುವನಹಳ್ಳಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒಳ್ಳೆಯ ಪ್ರಶ್ನೆ ಕೇಳಿದರು. ನಿಜ. ನಾನು ನಿರ್ದೇಶಕ. ನಾವು ಪ್ರೊಕ್ಯೂರ್‌ಮೆಂಟ್ ಮಾಡುತ್ತಿದ್ದೇವೆ. ಇವತ್ತು ಎಡಿಬಲ್ ಕೋಪ್ರವನ್ನು ಸುಮಾರು 40 ಕೋಟಿ ರೂಪಾಯಿಗಳನ್ನು ಕೊಟ್ಟು ಕೇಂದ್ರ ಸರ್ಕಾರದ ಸಪೋರ್ಟ್ ಪ್ರೈಸ್‌ನಲ್ಲಿ ಹಣ ಕೊಟ್ಟು ಆ ಸ್ಕೀಮ್‌ನಲ್ಲಿ ಮಾಡುತ್ತಿದ್ದೇವೆ. ಅದು ನಿಮಗೂ ಗೊತ್ತಿದೆ. ಮತ್ತೆ ಕಳೆದ ತಿಂಗಳು 28ನೇ ತಾರೀಖು ಬೋರ್ಡ್ ಮೀಟಿಂಗ್ ಇತ್ತು. ಮತ್ತೆ ನಾವು ಪ್ರೊಕ್ಯೂರ್ ಮಾಡಬೇಕೆಂದು ಪರ್ಮಿಷನ್ ತೆಗೆದುಕೊಳ್ಳಲು ನಾನೇ ನಮ್ಮ ಕೃಷಿ ಮಂತ್ರಿಗಳ ಹತ್ತಿರ ಹೋಗಿದ್ದೆ, ಈ ತರಹ ಪರಿಸ್ಥಿತಿ ಇದೆ, ಮಾನ್ಯ ಅಜೀತ್‌ಸಿಂಗ್‌ರವರು ಕೃಷಿ ಮಂತ್ರಿಗಳಾಗಿದ್ದಾರೆ, ಅವರ ಹತ್ತಿರ ಹೋಗಿ ನಮ್ಮ ಪರಿಸ್ಥಿತಿ ಈ ತರಹ ಆಗಿದೆ, ಆದಕ್ಕೆ ಬೇಗ ನಮಗೆ ಆರ್ಡರ್ ಕೊಡಿ ಎಂದು ಹೇಳಿ ಬಂದಿದ್ದೇನೆ. ಅವರು ಈಗಾಗಲೇ ಆರ್ಡರ್ ಕಳುಹಿಸಿದ್ದಾರೆ, ಆದರೆ ಕೇಂದ್ರ ಸರ್ಕಾರದಿಂದ ಹಣ ಕಳುಹಿಸಿಲ್ಲ.

ಶ್ರೀ ಟಿ.ಬಿ.ಜಯಚಂದ್ರ: ಕಳೆದ 15 ದಿವಸಗಳಿಂದಲೂ ನನಗೆ ಅದೇ ಉತ್ತರ ಬರುತ್ತಿದೆ. ಆಶ್ವಾಸನೆ ಸಿಗುತ್ತಿದೆ. ದುಡ್ಡು ಬರುತ್ತಿಲ್ಲ, ಪ್ರೊಕ್ಯೂರ್‌ಮೆಂಟ್ ಆಗುತ್ತಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ: ಅದು ಒಬ್ಬ ನಿರ್ದೇಶಕ ಮಾಡುವಂತಹ ಕೆಲಸ ಅಲ್ಲ. ನೆಫೆಡ್‌ನಿಂದ ಬರಬೇಕಾಗಿದ್ದರೆ ನಾನು ಒಂಟಿ ಕಾಲಿನ ಮೇಲೆ ನಿಂತು ಕಿತ್ತುಕೊಂಡು ಬರುತ್ತಿದ್ದೆ. ಅದು ಕೇಂದ್ರ ಸರ್ಕಾರದಿಂದ ಬರುವ ಹಣ. ನನ್ನ ಕಡೆಯಿಂದ ಏನು ಪ್ರಯತ್ನ ಮಾಡಬೇಕೋ ಅದನ್ನು ನಾನು ಮಾಡಿದ್ದೇನೆ.

ಛೇರ್ಮನ್: ಮಾನ್ಯ ಶ್ರೀನಿವಾಸಗೌಡರು ನೆಪೆಡ್ ನಿರ್ದೇಶಕರು. ಈ ನೀರಾ ಬಗ್ಗೆ ಮತ್ತು ನುಸಿ ರೋಗ ತಡೆಗಟ್ಟುವ ಬಗ್ಗೆ ತಮ್ಮ ಸಂಸ್ಥೆಯಿಂದ ಏನು ಕಾಣಿಕೆ ಸಲ್ಲಿಸಿದ್ದೀರಿ?

ಶ್ರೀ ಕೆ.ಶ್ರೀನಿವಾಸಗೌಡ (ಕುದುವನಹಳ್ಳಿ): ಮಾನ್ಯ ಅಧ್ಯಕ್ಷರೇ, ಅದು ಇನ್ನೂ ಅಲ್ಲಿಯವರೆಗೂ ಹೋಗಿಲ್ಲ. ಈ ನುಸಿ ರೋಗ ಕೇರಳ ಮತ್ತು ಕರ್ನಾಟಕ ರಾಜ್ಯದಲ್ಲಿ ಮಾತ್ರ ಇದೆ. ನಾನು ಆ ಕಡೆಗೂ ಬರುತ್ತೇನೆ. 25ನೇ ತಾರೀಖು ಈ ದೇಶದ ವ್ಯವಸಾಯ ಇಲಾಖೆಯ ಕಾರ್ಯದರ್ಶಿಗಳನ್ನು ಮತ್ತು ತೆಂಗು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರುಗಳನ್ನು ಅವರ ಕೊಠಡಿಯಲ್ಲಿಯೇ ಕರೆಸಿದ್ದೆ. ಅವರ ಜೊತೆಯಲ್ಲಿ ಚರ್ಚೆ ಮಾಡಿದೆ. ಈ ನೀರಾ ಇಳಿಸುವುದರಿಂದ ಏನಾದರೂ ಕಡಿಮೆಯಾಗುತ್ತದೆಯೇ ಈ ನುಸಿ ರೋಗ ಎಂದು ಕೇಳಿದೆ. ಆಗ ಅವರು ಹೇಳಿದರು, ಇದನ್ನು ಪೂರ್ತಿಯಾಗಿ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಆದರೆ ನುಸಿ ರೋಗ ಕಡಿಮೆ ಆಗುತ್ತದೆ ಎನ್ನುವ ಮಾತನ್ನು ಡೆಲ್ಲಿಯಲ್ಲಿ ಹೇಳಿದರು ಅವರ ಲ್ಯಾಬೋರೇಟರಿಯನ್ನು ನಮ್ಮ ರಾಜ್ಯದಲ್ಲಿ ಕೂಡ ಒಂದು ಮಾಡಿದ್ದಾರಂತೆ. ಅವರು ಇತ್ತೀಚೆಗೆ ಮಾಡಿದ್ದಾರೆ, ಅಲ್ಲಿ ಹೊಸ ಹೊಸ ಪ್ರಯೋಗಗಳನ್ನೂ ಸಹ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಆಗ ಹೇಳಿದರು. ಅದು ಆದರೆ ಒಳ್ಳೆಯದು. ಈಗ ಕೋಲಾರದಲ್ಲಿ ನಾವು ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದೇವೆ. ಅದಕ್ಕೆ ಹೂಜಿ ನೊಣ ಬಂತು ವೆಸ್ಟ್ ಬೆಂಗಾಲ್ ಕಡೆಯಿಂದ. ಇವತ್ತು ಆ ಹೂಜಿ ನೊಣವನ್ನು ಕಂಟ್ರೋಲ್ ಮಾಡುವಂತಹ ಪರಿಸ್ಥಿತಿಗೆ ಬಂದಿದ್ದೇವೆ. ನಾವು ಅದಕ್ಕೆ ಸ್ಕ್ರೀನ್‌ಗಳನ್ನು ಹಾಕುತ್ತೇವೆ, ಹೂಜಿ ನೊಣಗಳು ಹೋಗದಂತೆ ನೋಡುತ್ತೇವೆ. ನೆಟ್ ಹಾಕುತ್ತೇವೆ. ಇವತ್ತು ಚೈನಾದಲ್ಲಿ ಮಿಡಿತೆಗಳ ಹಾವಳಿ ಬಂತು. ಚೈನಾದೇಶದಲ್ಲಿ ಬೆಳೆದಂತಹ ಎಲ್ಲಾ ಬೆಳೆ ಹಾಳಾಗಿ ಹೋಯಿತು. ಅದು ಹಾಗೆಯೇ ಇದೆಯೇ? ಕಂಟ್ರೋಲ್ ಆಗುತ್ತದೆ. ಅದನ್ನು ಕಂಟ್ರೋಲ್ ಮಾಡುವಂತಹ ಇಚ್ಛಾಶಕ್ತಿ ಸರ್ಕಾರಕ್ಕೆ ಬರಬೇಕು ಎನ್ನುವುದೇ ನನ್ನ ಪ್ರತಿಪಾದನೆ. ಇವತ್ತು ನೀರಾ ಇಳಿಸಲು ಅನುಮತಿ ಕೊಡಿ ಎಂದು ಏಕೆ ಕೇಳುತ್ತಿದ್ದೇವೆಂದರೆ ನಮಗೆ ತೆಂಗಿನ ಬೆಳೆ ಬರಬೇಕು, ರೈತನಿಗೆ ಆಗಿರುವ ಕಷ್ಟ ಹೋಗಲಾಡಿಸಬೇಕು ಎನ್ನುವ ಒಂದೇ ಒಂದು ಹಿನ್ನೆಲೆಯಲ್ಲಿ ನಾನು ಇದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕೋಕಾಕೋಲಾ, ಪೆಪ್ಸಿ ಇವೆಲ್ಲಾ ಮಾಡುತ್ತೇವೆ. ನಾನು ನಮ್ಮ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ, ಕಳೆದ ಎರಡು ವರ್ಷಗಳಿಂದ ಈ ನುಸಿ ಬಂದಾಗ ಏಕೆ ಇಂತಾದ್ದನ್ನು ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ? ಈ ಬಗ್ಗೆ ಸರ್ಕಾರ ಚಿಂತನೆ ಏಕೆ ಮಾಡಲಿಲ್ಲ? ನಾವು ಕೋಕಾಕೋಲಾ, ಫ್ಯಾಂಟಾ, ಪೆಪ್ಸಿಗಳನ್ನು ಬೇರೆ ದೇಶಕ್ಕೆ ಕಳುಹಿಸುವಂತಹ ಮಟ್ಟಕ್ಕೆ ಹೋಗಿದ್ದೇವೆ, ಈ ನೀರಾ ತೆಗೆದು ಈ ತರಹ ಮಾಡಿ. ಬೇರೆ ದೇಶಗಳಿಂದ ನಮ್ಮ ದೇಶಕ್ಕೂ ಈ ಪಾನೀಯಗಳು ಬರುತ್ತಿವೆ. ಇವತ್ತು ಎಳನೀರನ್ನು ಏನಾದರೂ ಮಾಡುವಂತಹ ಪರಿಸ್ಥಿತಿಗೆ ನೀವು ಬಂದಿದ್ದೀರಾ?

ಛೇರ್ಮನ್: ನಮ್ಮ ಶಿವಮೊಗ್ಗದ ಶಾಸಕರಾದ ಮಾನ್ಯ ಚಂದ್ರಶೇಖರಪ್ಪನವರು ನಿನ್ನೆ ಫ್ರೀಯಾಗಿ ಎಲ್ಲರಿಗೂ ಒಂದೊಂದು ಎಳನೀರು ಕೊಟ್ಟಿದ್ದಾರೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ನೀರಾ ಆಗುಹೋಗುಗಳ ಬಗ್ಗೆ ಕೆಲವರು ಮಾತನಾಡಿದ್ದಾರೆ. ನಾನು ಅದಕ್ಕೆ ಹೋಗುವುದಿಲ್ಲ. ಇವತ್ತು ನಾವು ನೀರಾ ಇಳಿಸಲೇಬೇಕು

ಎಂದು ಹೇಳುತ್ತಿಲ್ಲ. ಆದರೆ ಈ ನುಸಿ ರೋಗವನ್ನು ಕಂಟ್ರೋಲ್ ಹೇಗೆ ಮಾಡುತ್ತೀರಿ? ತಾವು ಏನು 9 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ ಅದು ರಾಕ್ಷಸನಿಗೆ ಆರ್ ಕಾಸಿನ ಮಜ್ಜಿಗೆ ಅಂದ ಹಾಗೆ ಆಗುತ್ತದೆ. ಆಗಲೇ ಮಾನ್ಯ ಹನುಮೇಗೌಡರು ಹೇಳುತ್ತಿದ್ದರು. ನಿಮ್ಮ ಮಕ್ಕಳಿಗೆ ಕುಡಿಸಿರಿ ಎಂದು, ನಾನು ಕುಡಿದಿದ್ದೇನೆ, ಇಲ್ಲ ಎಂದು ಅನ್ನುವುದಿಲ್ಲ. ಮೊನ್ನೆ ಲಕ್ಷದ್ವೀಪಕ್ಕೆ ಹೋಗಿದ್ದೆ, ಅಲ್ಲಿ ಎಲ್ಲಾ ಮುಸ್ಲಿಮರೇ. ಅಲ್ಲಿ ಬೆಳಿಗ್ಗೆ ಆದ ತಕ್ಷಣ ಬಾಟಲಿಗಳಲ್ಲಿ ಹಾಕಿಕೊಂಡು ತಂದರು. ಅಲ್ಲಿ ನೀರಾನೇ ಮಾರುತ್ತಾರೆ. ಅಲ್ಲಿ ತೆಂಗು ಬಿಟ್ಟು ಇನ್ನೇನೂ ಬೆಳೆಯುವುದಿಲ್ಲ. ಆ ಹಿನ್ನೆಲೆಯಲ್ಲಿ ನಮ್ಮಲ್ಲೂ ಅವಕಾಶ ಮಾಡಿಕೊಡಿ. ಸೇಂದಿ ಆದರೆ ತಪ್ಪಿಲ್ಲ, ಮೊದಲಿಗೆಲ್ಲಾ ಈಚಲು ಮರದಿಂದ ಸೇಂದಿ ತೆಗೆಯುತ್ತಿದ್ದರು. ಈಚಲು ಮರ ಕಾಡುಗಳಲ್ಲಿ ಬೇಕಾದಷ್ಟಿತ್ತು, ನಾವೂ ಬೆಳೆಸುತ್ತಿದ್ದೆವು. ಅವೆಲ್ಲಾ ಕಡಿಮೆಯಾದ ಮೇಲೆ ಈಗ ಬೇರೆ ಬೇರೆ ಕೆಮಿಕಲ್ಸ್ ಬೆರೆಸುವ ಕೆಲಸ ಬಂತು. ಅದಕ್ಕಾಗಿ ಆಗ ಸೇಂದಿ ನಿಲ್ಲಿಸಿದರು. ಇವತ್ತಿಗೂ ಒಳ್ಳೆಯ ಮರದಿಂದ ಸೇಂದಿ ಕೊಟ್ಟರೆ, ಕಲಬೆರಕೆ ಆಗಿರದೇ ಇದ್ದರೆ ಅದು ಸಾರಾಯಿಗಿಂತ ಸಾವಿರ ಪಾಲು ಮೇಲು. ಕೇವಲ 4 ಪರ್ಸೆಂಟ್ ಆಲ್ಕೋಹಾಲ್ ಇರುತ್ತದೆ. ಅದರಿಂದ ಆತನ ದೇಹದ ಆರೋಗ್ಯ ಕೂಡ ಸರಿಹೋಗುತ್ತದೆ. ಇವತ್ತು ಜನ ರೊಚ್ಚಿಗೆದ್ದಿದ್ದಾರೆ, ಯಾರು ಕಂಟ್ರೋಲ್ ಮಾಡುತ್ತಿರುವುದು? ಅಬ್ಕಾರಿ ಕಂಟ್ರಾಕ್ಟರುಗಳ ಜೀಪ್‌ಗಳಲ್ಲಿ ಅಬ್ಕಾರಿ ಇಲಾಖೆಯರು ಹೋಗಿ ನಿಯಂತ್ರಿಸುತ್ತಿರುವುದು. ಹೀಗೆ ಅಬ್ಕಾರಿ ಸಾರಾಯಿ ಕಂಟ್ರಾಕ್ಟರಿದ್ದಾರೆ. ಇವರು ದಂಧೆ ಮಾಡುತ್ತಿದ್ದಾರೆ. ಅವರನ್ನು ಹೆದರಿಸುತ್ತಾರೆ, ಮಡಕೆ ಒಡೆಯುತ್ತಾರೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಅವಕಾಶ ಕೊಡದೇ ಇದ್ದರೆ ಜನ ರೊಚ್ಚಿಗೇಳುತ್ತಾರೆ. ದಯವಿಟ್ಟು ನೀವು ತೆಂಗು ಬೆಳೆಯುವ ರೈತರ ಸಹಾಯಕ್ಕೆ ಬನ್ನಿ. ಅವರನ್ನು ಕಾಪಾಡಿ. ನುಸಿರೋಗ ಬರದಂತೆ ಮಾಡಿ. ಇಲ್ಲದೇ ಇದ್ದರೆ ನೀರಾ ಅಥವಾ ಸೇಂದಿ ಮಾರಲು ಅವಕಾಶ ಮಾಡಿಕೊಡಿ ಎಂದು ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಚಲುವರಾಯಸ್ವಾಮಿ(ನಾಗಮಂಗಲ): ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಹಳ ಜನ ಈ ವಿಚಾರದಲ್ಲಿ ಬೆಳಕು ಚೆಲ್ಲಿದ್ದಾರೆ. ಬಹಳ ಮುಖ್ಯವಾಗಿ ನೀರಾ ಇಳಿಸಿ ಅದನ್ನು ಹೇಗೆ ಮಾರುವುದು, ಅನುಕೂಲ ಅನಾನುಕೂಲಗಳೇನು ಎಂದು ಸರ್ಕಾರ ಯೋಚನೆ ಮಾಡಬೇಕು. ರೈತರಿಗಿರುವುದು ಒಂದೇ ಸಮಸ್ಯೆ. ನಮ್ಮ ತೆಂಗಿಗೆ ಕಾಯಿಲೆ ಬಂದಿದೆ, ಇದನ್ನು ಹೋಗಲಾಡಿಸಿ ನೀರಾ ಇಳಿಸಿ ಎಂದು ಯಾರೂ ಕೇಳಲಿಲ್ಲ ಮೊದಲು. ಅದನ್ನು ಹೋಗಲಾಡಿಸಲು ಆಗಲಿಲ್ಲವೆಂದಾಗ ಮಾನ್ಯ ಬೈರೇಗೌಡರ ಅಧ್ಯಕ್ಷತೆಯಲ್ಲಿದ್ದ ವಿಷಯ ಸಮಿತಿಯಲ್ಲೇ ವಿಜ್ಞಾನಿಗಳನ್ನು ಕರೆಸಿದಾಗ ಅವರೇ ಹೇಳಿದರು, ನೀರಾ ಇಳಿಸುವುದರಿಂದ ಈ ಕಾಯಿಲೆ ನಿವಾರಣೆ ಮಾಡಬಹುದು ಎಂದು. ನಮಗೇನೂ ಗೊತ್ತಿರಲಿಲ್ಲ. ಹಾಗೆ ಮಾಡದೆ ಇದೇ ಪರಿಸ್ಥಿತಿ ಮುಂದುವರೆದರೆ ಮಾನ್ಯ ಶ್ರೀನಿವಾಸಗೌಡರು ಹೇಳಿದಂತೆ ಜೆಸಿಬಿ ತಂದು ತೆಂಗನ್ನು ಮುರಿದು ಹಾಕಬೇಕಾಗುತ್ತದೆ. ಆ ಭಯದಿಂದ ನೀರಾ ಇಳಿಸಬೇಕೆಂದು ರೈತರು ಮುಂದೆ ಬಂದಿದ್ದಾರೆಯೇ ವಿನಹ ನೀವು ನುಸಿರೋಗ ನಿವಾರಣೆ ಮಾಡಿದರೆ ಅವರು ನೀರಾ

ಇಳಿಸಬೇಕೆಂದು ಕೇಳುವುದಿಲ್ಲ. ಮೊದಲನೆಯದಾಗಿ, ನುಸಿರೋಗ ಹೋಗಲಾಡಿಸಲು ಸರ್ಕಾರದಿಂದ ಏನಾದರೂ ಕಂಡುಹಿಡಿದಿದ್ದೀರಾ? ಅದನ್ನು ಮಾಡುತ್ತೀರಾ? ನಿಮ್ಮ ಸೈಂಟಿಸ್ಟ್ ವೈಜ್ಞಾನಿಕವಾಗಿ ಹೇಳದೇ ಇದ್ದಿದ್ದರೆ, ಅಥವಾ ಎಲ್ಲಾ ಕಡೆ ಪ್ರಚಾರವಾಗದೇ ಇದ್ದಿದ್ದರೆ, ರೈತರು ಅದನ್ನು ಕೇಳುತ್ತಿರಲಿಲ್ಲ. ಆದ್ದರಿಂದ ಅದರಲ್ಲಿ ಮುಚ್ಚಿಡುವುದೇನಿದೆ? ಇವತ್ತು ಒಬ್ಬ ಮನುಷ್ಯ ತನ್ನ ಸಂಸಾರದಲ್ಲೇನಾದರೂ ಕಾಯಿಲೆ ಬಂದರೆ ಮನೆಯ ಆರ್ಥಿಕ ಪರಿಸ್ಥಿತಿ ನೋಡುವುದಿಲ್ಲ, ಸಾಲ ಮಾಡಿಯಾದರೂ ಸರಿ, ಒಂದು ಎಕರೆ ಜಮೀನು ಮಾರಿಯಾದರೂ ಸರಿ ಕಾಯಿಲೆಯಿಂದ ಮುಕ್ತಿಗೊಳಿಸಲು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾನೆ. ಇವತ್ತು ನಮ್ಮ ರೈತರು ಈ ದೇಶದ ಬೆನ್ನೆಲುಬು ಎನ್ನುತ್ತೇವೆ, ಇಂಥ ಸಮಸ್ಯೆ ಆ ರೈತರಿಗೆ ಬಂದಿದೆ, ಬರಗಾಲವಿದೆ, ಬೆಳೆದ ಯಾವುದಕ್ಕೂ ರೇಟ್ ಸಿಗುವುದಿಲ್ಲ, ಆ ಕಾಯಿಲೆಯಿಂದ ಸಂಪೂರ್ಣ ಮುಕ್ತಿ ಸಿಗುತ್ತದೆ ತೆಂಗಿಗೆ ಎಂಬ ಮಾಹಿತಿ ಇದ್ದಾಗಲೂ ಈ ವಿಷಯದಲ್ಲಿ ನಾವ್ಯಾಕೆ ಯೋಚನೆ ಮಾಡುತ್ತಿಲ್ಲ? ಇವತ್ತು ನೀರಾ ಬೇಕೇ ಅಥವ ಬೇಡವೇ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು. ಇದನ್ನು ಎಕ್ಸ್‌ಪೋರ್ಟ್ ಮಾಡಲು ಸಾಧ್ಯವೇ? ಇದರಿಂದ ಔಷಧಿಗೆ ಉಪಯೋಗಿಸಲು ಸಾಧ್ಯನಾ ಅಥವಾ ಇನ್ನೇನಾದರೂ ಇಂಡಸ್ಟ್ರೀಗೆ ಉಪಯೋಗಿಸಲು ಸಾಧ್ಯನಾ? ಈಗಿರುವ ಸ್ಥಿತಿಯಲ್ಲಿ ನೀರಾ ಇಳಿಸಲು ಅನುಮತಿ ಕೊಡುವುದೇ ಅಥವಾ ಬೇರೆ ತರಹ ಹೋಗಲಾಡಿಸಬಹುದು, ಇಲ್ಲದಿದ್ದರೆ ಆರ್ಥಿಕವಾಗಿ ಅವರ ಸಂಕಷ್ಟಕ್ಕೆ ಯಾವ ರೀತಿ ಹೋಗಬಹುದು ಅನ್ನುವುದನ್ನು ನಾವು ಯೋಚಿಸಬೇಕಾಗಿದೆ. ಮೊನ್ನೆ ಮಾನ್ಯ ವೈ.ಕೆ.ರಾಮಯ್ಯ ಹೇಳಿದಂತೆ ಒಬ್ಬ ಆಫೀಸರ್‌ನ ಚೇಂಬರ್ ಒಳಕ್ಕೆ ಹೋದರೆ ನಮಗೆ ಅಟ್ಯಾಕ್ ಆದ ಹಾಗಾಗುತ್ತದೆ. ನಾಲ್ಕೈದು ಜಿಲ್ಲೆಗಳಲ್ಲಿ ಪ್ರಮುಖವಾಗಿರುವುದು ತೆಂಗು ಬೆಳೆ. ಇದರಿಂದ ನಮಗೆ ಆರ್ಥಿವಾಗಿ ಕಷ್ಟವಾಗಬಹುದು, ಬೇರೆ ತರಹ ಸಮಸ್ಯೆ ಬರಬಹುದು. ಇದರಿಂದ ರೈತರ ಸಮಸ್ಯೆಗೆ ನಾವೇನಾದರೂ ಪರಿಹಾರ ಕೊಟ್ಟಂತಾಗುವುದು. ಆ ಕಾರಣದಿಂದ ಸರ್ಕಾರ ಇದನ್ನು ದೀರ್ಘವಾಗಿ ಯೋಚನೆ ಮಾಡಿ ಇದರ ಪರಿಹಾರ ಕಂಡುಹಿಡಿಯಲು ಮುಂದಾಗಬೇಕು. ಈ ಕಾರಣದಿಂದಷ್ಟೇ ನೀರಾ ಇಳಿಸಬೇಕೆನ್ನುವುದು ವಿನಹ ನೀರಾ ಬಗ್ಗೆ ನಮಗೇನೂ ಭ್ರಮೆಯಿಲ್ಲ, ಪೂರ್ವಾಗ್ರಹವೂ ಇಲ್ಲ. ಇದೊಂದು ಕಾಯಿಲೆ, ಇನ್ನೊಂದು ವರ್ಷ ಹೀಗೆ ಮುಂದುವರೆದರೆ [illegible] ಗಿಡ ಹಾಳಾಗುವುದರಿಂದ ಬೇರೆ ತರಹದಿಂದ ಕಾಯಿಲೆ ಹೋಗಲಾಡಿಸಲು ಸಾಧ್ಯವಿದ್ದರೆ ಅದನ್ನು ಮಾಡಿ ಇಲ್ಲದಿದ್ದರೆ ಎರಡು ವರ್ಷ ಸತತವಾಗಿ ನೀರಾ ಇಳಿಸಿದರೆ ಆ ಕಾಯಿಲೆ ಹೋಗುತ್ತದೆ, ಮತ್ತೆ ಆ ಗಿಡಗಳು ಎರಡು ವರ್ಷ ಏನು ನಷ್ಟ ಮಾಡಿದ್ದವು ಅದಕ್ಕಿಂತ ಹೆಚ್ಚು ಫಲ ಬಿಡುತ್ತವೆ ಎಂಬ ಮಾಹಿತಿ ಇರುವುದರಿಂದ ಇದನ್ನು ಮಾಡಬೇಕು. ಜೊತೆ ನೀರಾ ಇಳಿಸುವುದರಿಂದ ಆರ್ಥಿಕ ಪರಿಸ್ಥಿತಿ ಮೇಲಾಗುವ ಪರಿಣಾಮದ ಮಾತಲ್ಲ, ಆ ಗಿಡವನ್ನು ರಕ್ಷಣೆ ಮಾಡಿಕೊಳ್ಳಬಹುದು ಅದರಿಂದ ಸ್ವಲ್ಪ ಆದಾಯ ಬಂದರೂ ತಾತ್ಕಾಲಿಕವಾಗಿ ರೈತ ಜೀವನ ಮಾಡಿಕೊಳ್ಳಬಹುದು ಎಂಬುದಾಗಿ ರೈತರ ಕೂಗಿದೆ. ಇದಕ್ಕೆ ಸರ್ಕಾರ ಸ್ಪಂದಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಅಧ್ಯಕ್ಷರೇ, ನಿಯಮ 69ರ ಅಡಿಯಲ್ಲಿ ಸಾಕಷ್ಟು ವಿಚಾರಗಳನ್ನು ಸದಸ್ಯರು ನೀರಾ ಇಳಿಸುವ ಬಗ್ಗೆ ಮಾತನಾಡಿದ್ದಾರೆ. ನಾನು ಮುಖ್ಯಮಂತ್ರಿಗಳ ಗಮನವನ್ನು ವಿಶೇಷವಾಗಿ ಮೂರು ಸಲಹೆಗಳ ಕಡೆಗೆ ಸೆಳೆಯಲಿಚ್ಛಿಸುತ್ತೇನೆ. ಒಂದು ಬೇರೆ ರಾಜ್ಯಗಳಲ್ಲೂ ಇದಿದೆ. ಬೇರೆ ರಾಷ್ಟ್ರಗಳಿಂದ ಬಂದಿರುವ ಕಾಯಿಲೆ ಇದು, ಮತ್ತೆ ಮುಂದೆ ಬರುವುದಿಲ್ಲ ಎಂಬ ಗ್ಯಾರಂಟಿ ಅನ್ನು ಇಟ್ಟುಕೊಳ್ಳಲು ಆಗುವುದಿಲ್ಲ. ಶ್ರೀಲಂಕಾ ಇತ್ಯಾದಿ ರಾಷ್ಟ್ರಗಳಿಂದ ಬರುವ ಸಂಭವವಿದೆ. ಮತ್ತೆ ರೈತನಿಗೆ ಏನಾಗಿದೆ ಈಗ? ತೆಂಗಿನಕಾಯಿ ಬೆಲೆ, ಎಳನೀರಿನ ಬೆಲೆ ಕಡಿಮೆಯಾಗಿರುವುದು ಒಂದು ಕಡೆ, ಉತ್ಪನ್ನವೂ ಮತ್ತೊಂದು ಕಡೆ ಕಡಿಮೆಯಾಗಿರುವುದರಿಂದ ಸರ್ಕಾರದ ಬಗ್ಗೆ, ನಮ್ಮೆಲ್ಲರ ಬಗ್ಗೆ ಒಂದು ತರಹ ಸಂಶಯ ಬಂದಿದೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು, ಒಂದು ಸದನದ ಸಮಿತಿಯನ್ನು ತಾವು ರಚನೆ ಮಾಡಿಸಿ. ಯಾರು ತೆಂಗಿನ ಬೆಳೆ ಬಗ್ಗೆ ತಿಳಿದಿರುವ ಸದಸ್ಯರಿದ್ದಾರೆ ಅವರೇ ಇದರಲ್ಲಿ ವಿಶೇಷವಾಗಿರಲಿ, ನಿಮ್ಮ ಪಕ್ಷದವರೇ ಅದಕ್ಕೆ ಅಧ್ಯಕ್ಷರಾಗಿರಲಿ, ಕೇರಳ ಮತ್ತು ಬೇರೆ ರಾಜ್ಯಗಳಲ್ಲಿ ಏನು ಮಾಡುತ್ತಿದ್ದಾರೆ ಎಂಬ ಬಗ್ಗೆ ಮೂರು ತಿಂಗಳೊಳಗೆ ಅವರೊಂದು ವರದಿ ಕೊಡಲಿ. ಎರಡನೆಯದಾಗಿ ತಾವು ಎಲ್ಲೋ ಒಂದು ಸಮಾರಂಭದಲ್ಲಿ ಭಾಗವಹಿಸಿದ್ದಾಗ ನಾನು ತೆರೆದ ಮನಸ್ಸಿಟ್ಟುಕೊಂಡಿದ್ದೇನೆ, ನೀರಾ ಇಳಿಸಲು ಅವಕಾಶ ಕೊಟ್ಟರೆ ನುಸಿರೋಗ ಹೋಗುತ್ತದೆ ಅನ್ನುವುದಾದಲ್ಲಿ ನಾವು ಅದಕ್ಕೆ ತಯಾರಾಗಿದ್ದೇವೆಂದು ವರದಿಯಾಗಿದೆ, ಅದು ಸತ್ಯವೋ ಅಸತ್ಯವೋ ನನಗೆ ಗೊತ್ತಿಲ್ಲ. ಆದರೆ ಆ ರೀತಿ ಹೇಳಿದ್ದರೆ ಅದು ಬಹಳ ಒಳ್ಳೆಯದು. ನನ್ನ ವಿನಂತಿಯೇನೆಂದರೆ, ಒಂದು ತಜ್ಞರ ಸಮಿತಿ ಮಾಡಿ, ಯಾವರೀತಿ ಆತ್ಮಹತ್ಯೆಗಳನ್ನು ಕಡಿಮೆ ಮಾಡಲು, ರೈತರು ಬದುಕಲು ಭರವಸೆ ಕೊಡುವುದಕ್ಕೆ ನಿಜವಾದ ಸಮಸ್ಯೆಗಳೇನಿವೆ ಎಂದು ತಿಳಿದುಕೊಳ್ಳಲು ಒಂದು ಸಮಿತಿ ಮಾಡಿದ್ದೀರಿ, ಅಂತಹ ಒಂದು ಸಮಿತಿ ರಚನೆ ಮಾಡಿ ಮೂರು ತಿಂಗಳೊಳಗೆ ವರದಿ ಕೊಡಬೇಕೆಂದು ಅವರಿಗೂ ಸಮಯ ನಿಗದಿಪಡಿಸಿ. ಈಗಾಗಲೇ ಇದರ ಬಗ್ಗೆ ಸಾಕಷ್ಟು ಸಲಹೆಗಳು ಬಂದಿವೆ. ಮೂರನೆಯದಾಗಿ, ತೆಂಗು ಹೆಚ್ಚಾಗಿ ಬೆಳೆಯುವ 3-4 ಜಿಲ್ಲೆಗಳಲ್ಲಿ ಒಂದೊಂದು ತಾಲ್ಲೂಕನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಪ್ರಾಯೋಗಿಕವಾಗಿ ನೀರಾ ಇಳಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಮಾರುಕಟ್ಟೆ ಸಮಸ್ಯೆ ಇರಬಹುದು ಮತ್ತು ತೆಂಗಿನ ಮರಗಳಿಗೆ ತಗುಲಿರುವ ನುಸಿರೋಗ ಕಡಿಮೆಯಾಗುತ್ತದೆಯೇ, ಇಲ್ಲವೆ ಎಂಬುದು ಮೂರು ತಿಂಗಳಿನಲ್ಲಿ ಗೊತ್ತಾಗುತ್ತದೆ. ಇದಾದ ನಂತರ ಮುಂಬರುವ ನವೆಂಬರ್, ಡಿಸೆಂಬರ್ ತಿಂಗಳಿನಲ್ಲಿ ಮತ್ತೊಮ್ಮೆ ಅಧಿವೇಶನ ಸೇರಿದಂಥ ಸಂದರ್ಭದಲ್ಲಿ ಈ ಕುರಿತಂತೆ ವಿಚಾರ ಮಾಡಬಹುದೆಂದು ತಿಳಿಸುತ್ತಾ, ನನ್ನ ಮೂರು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಚೇರ್ಮನ್: ಇದಕ್ಕೆ ಏನಾದರೂ ಇಂಡಸ್ಟ್ರಿಯಲ್ ಯೂಸ್ ವ್ಯಾಲ್ಯೂ ಇದೆಯೋ, ಅಥವಾ ಮೆಡಿಸಿನಲ್ ಆರೋಮ್ಯಾಟಿಕ್ ವ್ಯಾಲ್ಯೂ ಇದೆಯೇ ಎಂಬುದನ್ನು ಕೂಡ ಎಕ್ಸಾಮಿನ್ ಮಾಡಿದರೆ ರೈತನಿಗೆ ಸ್ವಲ್ಪ ಒಳ್ಳೆ ಬೆಲೆ ಸಿಗಬಹುದು ಎಂದು ಕಾಣುತ್ತದೆ.

ಶ್ರೀ ಟಿ.ಬಿ.ಜಯಚಂದ್ರ(ಕೃಷಿ ಸಚಿವರು): ಮಾನ್ಯ ಛೇರ್ಮನ್‌ರವರೆ, ತೆಂಗು ಬೆಳೆಗೆ ತಗುಲಿರುವ ನುಸಿರೋಗವನ್ನು ನಿಯಂತ್ರಿಸುವುದರ ಕುರಿತು ವಿರೋಧ ಪಕ್ಷದ ಅನೇಕ ಮಾನ್ಯ ಸದಸ್ಯರು ಹಾಗೂ ಆಡಳಿತ ಪಕ್ಷದ ಮಾನ್ಯ ಸದಸ್ಯರು ಮಾತನಾಡಿದ್ದಾರಲ್ಲದೆ 'ನೀರಾ' ಇಳಿಸುವ ಮೂಲಕ ನುಸಿರೋಗವನ್ನು ನಿಯಂತ್ರಿಸಬಹುದೆಂಬ ಪರ್ಯಾಯ ವ್ಯವಸ್ಥೆ ಬಗ್ಗೆಯೂ ತಮ್ಮ ಅನುಭವದ ಆಧಾರದ ಮೇಲೆ ವಾದವನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಇವೊತ್ತು ರೈತರು ಅನುಭವಿಸುತ್ತಿರುವ ಕಷ್ಟಗಳಾವುವು? ಆತನ ನೆರವಿಗೆ ಸರ್ಕಾರ ಯಾವ ರೀತಿ ಬರಬಹುದೆಂಬ ಬಗ್ಗೆ ಚರ್ಚಿಸುವ ಮೂಲಕ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರುಗಳು ನೀಡಿರುವ ಎಲ್ಲಾ ಸಲಹೆಗಳನ್ನು ಸರ್ಕಾರ ಸ್ವೀಕರಿಸುತ್ತದೆ ಹಾಗೂ ಸರ್ಕಾರ ಇದಕ್ಕಾಗಿ ಅವರೆಲ್ಲರಿಗೂ ಆಭಾರಿಯಾಗಿರುತ್ತದೆ. ದಕ್ಷಿಣ ಕರ್ನಾಟಕದ ಸುಮಾರು 12-13 ಜಿಲ್ಲೆಗಳು ವಿಶೇಷವಾಗಿ ತೆಂಗು ಬೆಳೆ ಬೆಳೆಯುವ ಜಿಲ್ಲೆಗಳಾಗಿವೆ. ತೆಂಗು ಬೆಳೆಯಲು ಮೂರು ವರ್ಷ ಕಷ್ಟಪಟ್ಟರೆ ಅದು ನಮ್ಮನ್ನು ನೂರು ವರ್ಷಗಳ ಕಾಲ ಸಾಕುತ್ತದೆಂದು ನಾವೆಲ್ಲರೂ ನಂಬಿದ್ದೆವು. ತೆಂಗನ್ನು 'ಕಲ್ಪವೃಕ್ಷ' 'ಕಾಮಧೇನು' ಎಂತಲೂ ಕರೆದೆವು. ಆದರೆ, ಇವೊತ್ತು 'ಕಾಮಧೇನು'ವಿಗೆ ಬರಬಾರದ ರೋಗ ಬಂದಿದೆ! ಅಷ್ಟೇ ಏಕೆ, ನಾವು ಉಪಯೋಗಿಸುತ್ತಿರುವ ಎಲ್ಲಾ ಔಷಧಿಗಳಿಗೂ ಮೂಲವಾಗಿರುವ 'ಬೇವು' ಮರಕ್ಕೂ ಕೂಡ ರೋಗ ಬಂದಿರುವುದನ್ನು ಯಥೇಚ್ಛವಾಗಿ ಕಾಣುತ್ತಿದ್ದೇವೆ. ಬಳ್ಳಾರಿಯ ಭಾಗದಲ್ಲಿರುವ ಬೇವಿನ ಮರಗಳೆಲ್ಲವೂ ರೋಗಕ್ಕೆ ತುತ್ತಾಗಿದ್ದು ಬೋಳು ಬೋಳಾಗಿ ನಿಂತಿವೆ ಹಾಗೂ ಮರಗಳಿಗೆ ಯಾವುದೇ ರೀತಿಯಲ್ಲೂ ಕಾಯಕಲ್ಪ ಮಾಡದಿರುವ ಪರಿಸ್ಥಿತಿಗೆ ತಲುಪಿವೆಯೆಂದಾಗ ಮನುಷ್ಯನಿಗೆ ಹೇಗೆ ರೋಗ ಬರುತ್ತದೋ ಹಾಗೆಯೇ ಗಿಡಕ್ಕೂ, ಮರಕ್ಕೂ ಬಂದೇ ಬರುತ್ತದೆ. ಇದನ್ನು ಯಾರೂ ತಪ್ಪಿಸುವುದಕ್ಕಾಗುವುದಿಲ್ಲ. ಬೇವಿಗೆ ಕೀಟಗಳನ್ನು ನಿಯಂತ್ರಿಸುವ ಶಕ್ತಿಯಿದ್ದರೆ ಫಂಗಸ್ ಅನ್ನು ನಿಯಂತ್ರಿಸುವುದಕ್ಕಾಗುವುದಿಲ್ಲ. ಹಾಗಾಗಿ ಬೇವಿಗೆ ಫಂಗಸ್ ಬಾಧೆ ತಪ್ಪದು. ಇದು ನಮ್ಮ ಮುಂದಿರುವ ಚಿತ್ರಣ. ಅನೇಕ ಮಾನ್ಯ ಸದಸ್ಯರು ಯುರೋಫೈಡ್ ಮೈಟ್ಸ್ ಕುರಿತು ಮಾತನಾಡಿದ್ದು, ಇದು ನಮ್ಮ ದೇಶದಲ್ಲಿ ಉತ್ಪತ್ತಿಯಾಗಿದ್ದಲ್ಲ. ಸುಮಾರು 25-30 ವರ್ಷಗಳ ಹಿಂದೆ ಮೆಕ್ಸಿಕೋ ದೇಶದಲ್ಲಿ ಪ್ರಾರಂಭವಾಗಿ ಅಲ್ಲಿಂದ ಅನೇಕ ದೇಶಗಳ ಮೂಲಕ ಹಾದು ಶ್ರೀಲಂಕಾ ದೇಶಕ್ಕೆ ಬಂದು, ಅಲ್ಲಿಂದ ನಮ್ಮ ದೇಶಕ್ಕೆ, ರಾಜ್ಯಕ್ಕೆ ಬಂದಿದೆ. ಈ ಯುರೋಫೈಡ್ ಮೈಟ್ಸ್ ರೋಗದಲ್ಲಿ ಸುಮಾರು ಒಂಬತ್ತು ಸ್ಪೀಷಿಸ್‌ಗಳನ್ನು ಗುರ್ತಿಸಬಹುದಾಗಿದೆ. ಒಂದೊಂದು ಕಡೆಗಳಲ್ಲಿ ಒಂದೊಂದು ಸ್ಪೀಷಿಸ್ ಕಂಡುಬಂದಿದೆ. ಸದರಿ ರೋಗವನ್ನು ನಿಯಂತ್ರಿಸುವುದಕ್ಕೆ ಹೊರ ಪ್ರಪಂಚದಲ್ಲಿ ಏನೇನು ಪ್ರಯತ್ನಗಳಾಗಿವೆ ಎಂಬುದನ್ನು ಕಂಡಿದ್ದೇವೆ. ರೋಗವನ್ನು ನಿಯಂತ್ರಿಸಲು ಮೆಕ್ಸಿಕೋ ದೇಶದಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದರೂ ಒಟ್ಟಾರೆ ಉತ್ಪನ್ನದಲ್ಲಿ ಶೇಕಡ 30ರಷ್ಟು ನಷ್ಟವಾಗುತ್ತಿದೆ. ಆದರೂ ರೋಗ ನಿಯಂತ್ರಣಕ್ಕೆ ಬರುತ್ತಿಲ್ಲ. ಅವರ ಅನುಭವದ ಆಧಾರದ ಮೇಲೆ ನಾವೂ ಅವರ ಪದ್ಧತಿಯನ್ನು ಅನುಸರಿಸಿಕೊಂಡು ಹೋಗಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಈ ರೋಗ ಕಾಣಿಸಿಕೊಳ್ಳುವ ಮೊದಲು ಕೇರಳ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ಕಾಣಿಸಿಕೊಂಡಿದೆ. ಈ ದಿಸೆಯಲ್ಲಿ

ಅಧ್ಯಯನ, ಸಂಶೋಧನೆ ಹಾಗೂ ಫಾರ್ಮ್ ಮ್ಯಾನೇಜ್‌ಮೆಂಟ್‌ನಲ್ಲಿ ಅವರು ನಮಗಿಂತಲೂ ಸಾಕಷ್ಟು ಮುಂದೆ ಹೋಗಿದ್ದಾರೆ. ತಮಿಳುನಾಡಿಗೆ ನಾನು ಮೂರು ಸಲ ಹೋಗಿ ಬಂದಿದ್ದು ಅಲ್ಲಿನ ವಿಶ್ವವಿದ್ಯಾನಿಲಯದ ಸಂಬಂಧ ಪಟ್ಟವರೊಂದಿಗೆ ಚರ್ಚಿಸಿ, ಕ್ಷೇತ್ರಗಳಿಗೂ ಭೇಟಿಯಿತ್ತಿದ್ದೇನೆ. ಹಾಗೆಯೇ ಕೇರಳ ರಾಜ್ಯಕ್ಕೂ ಈ ಸಂಬಂಧವಾಗಿ ಹೋಗಿ ಬಂದಿರುತ್ತೇನೆ. ಹಾಗಾಗಿ ನಾನು ತಮಗೆ ತಿಳಿಸುವುದೇನೆಂದರೆ, ನಾವು ಯಾವುದೇ ರೀತಿಯಲ್ಲಾದರೂ ಬಂದಿರುವ ಈ ರೋಗವನ್ನು ನಿಯಂತ್ರಿಸಬಹುದೇ ವಿನಾ ಸಂಪೂರ್ಣ ನಿರ್ಮೂಲನೆ ಮಾಡುವುದಕ್ಕಾಗುವುದಿಲ್ಲವೆಂಬ ತೀರ್ಮಾನಕ್ಕೆ ಬಂದಿದ್ದೇವೆ. ನಮ್ಮ ರಾಜ್ಯಕ್ಕೆ ಈ ರೋಗ ಬಂದು 2-3 ವರ್ಷಗಳಾಯಿತು. ಈ ರೋಗ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಿಗೂ ಹರಡಿದೆಯಲ್ಲದೆ ಮುಂದಿನ ದಿನಗಳಲ್ಲಿ ಇಡೀ ಏಷ್ಯಾಖಂಡಕ್ಕೆ ವ್ಯಾಪಿಸಿದಲ್ಲಿ ಏನು ಪರಿಣಾಮವುಂಟಾಗಬಹುದು ಮತ್ತು ಇದರಿಂದ ಬೆಳೆಗಳ ಮೇಲೆ ಯಾವ ರೀತಿಯಾದ ಪರಿಣಾಮವುಂಟಾಗುತ್ತದೆಂದು ನಾನು ಹೇಳಬೇಕಿಲ್ಲ. ಈ ಹಿನ್ನೆಲೆಯಲ್ಲಿಯೇ ನಾವುಗಳೆಲ್ಲರೂ ಇವೊತ್ತಿನ ದಿವಸ ಪ್ರಮುಖವಾಗಿ ಚಿಂತಿಸಬೇಕಾಗಿರುವುದು. ಇಡೀ ಪ್ರಪಂಚದಲ್ಲಿ ಸುಮಾರು ಎಂಭತ್ತು ದೇಶಗಳಲ್ಲಿ ತೆಂಗು ಬೆಳೆಯುತ್ತಿದ್ದು, ಅತಿ ಹೆಚ್ಚು ಪ್ರಮಾಣದಲ್ಲಿ ತೆಂಗು ಬೆಳೆಯುವ ರಾಷ್ಟ್ರಗಳ ಪೈಕಿ ಭಾರತ ಮೊದಲನೆಯದಾಗಿದೆ. ಪ್ರಪಂಚದ ಒಟ್ಟಾರೆ ಉತ್ಪನ್ನದಲ್ಲಿ ಶೇಕಡ 25ರಷ್ಟು ಭಾರತವೊಂದರಲ್ಲಿಯೇ ಬರುತ್ತದೆ. ಅದರಲ್ಲೂ ದಕ್ಷಿಣ ಭಾರತದ ಅನೇಕ ರಾಜ್ಯಗಳಿಂದ ತೆಂಗು ಬೆಳೆಯು ಹೆಚ್ಚು ಉತ್ಪತ್ತಿಯಾಗುತ್ತದೆ. ಇದೊಂದು ಪ್ರಮುಖ ವಾಣಿಜ್ಯ ಬೆಳೆಯಾಗಿರುವುದರಿಂದ ಇದಕ್ಕೆ ತಗುಲಿರುವ ರೋಗವನ್ನು ನಿಯಂತ್ರಿಸುವುದಕ್ಕೆ ನಾವು ಅನೇಕ ಪರ್ಯಾಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಸಮಗ್ರ ಕೀಟ ನಿರ್ವಹಣಾ ಪದ್ಧತಿಯಿದ್ದು ಆ ಪದ್ಧತಿಯನ್ನು ಅನುಸರಿಸುವಲ್ಲಿ ಅನೇಕ ವಿಧಾನಗಳಿವೆ. ಇಂಟಗ್ರೇಟೆಡ್ ಪೆಸ್ಟ್ ಮ್ಯಾನೇಜ್‌ಮೆಂಟ್ ಎಂದು ಹೇಳುತ್ತಾರೆ. ಇದನ್ನು ಕಲ್ಚರಲ್, ಫಿಸಿಕಲ್, ಮೆಕಾನಿಕಲ್, ಬಯಾಲಾಜಿಕಲ್, ಕೆಮಿಕಲ್ ಮೆತಡ್ ಮುಂತಾಗಿ ಅನೇಕ ಮಾರ್ಗೋಪಾಯಗಳಿವೆ. ಆದಕಾರಣ, ಸಮಗ್ರ ಕೀಟ ನಿರ್ವಹಣಾ ಪದ್ಧತಿಗಳನ್ನು ಅನುಸರಿಸಿದಲ್ಲಿ ರೋಗವನ್ನು ಸ್ವಲ್ಪಮಟ್ಟಿಗೆ ತಹಬಂದಿಗೆ ತರಬಹುದಾಗಿದೆ. ಬಯಾಲಾಜಿಕಲ್ ಮೆಥೆಡ್ ಇರಬಹುದು, ಕಲ್ಚರಲ್ ಮೆತಡ್ ಇರಬಹುದು, ಇದನ್ನು ಯಾವ ರೀತಿಯಾಗಿ ಅನುಸರಿಸಬಹುದೆಂಬುದರ ಬಗ್ಗೆ ವಿಶೇಷವಾಗಿ ಹೇಳುವ ಅವಶ್ಯಕತೆಯಿಲ್ಲ. ಮಾನ್ಯ ಹಿರಿಯ ಸದಸ್ಯರಾದ ಭೈರೇಗೌಡರು ಮಾತನಾಡುವಾಗ ಸಮಗ್ರ ಕೀಟ ನಿರ್ವಹಣಾ ಪದ್ಧತಿ ಬಗ್ಗೆ ಸಾಕಷ್ಟು ಒತ್ತು ಕೊಟ್ಟಿರುವುದರಿಂದ ಇದನ್ನು ನಾನೂ ಒಪ್ಪುತ್ತೇನೆ. ತೆಂಗಿನ ಮರಗಳಿಂದ 'ನೀರಾ' ಇಳಿಸುವುದು ಕೂಡ ಸಮಗ್ರ ಕೀಟ ನಿರ್ವಹಣಾ ಪದ್ಧತಿಗಳಲ್ಲೊಂದು ಎಂದು ಹೇಳಿರುವ ಅವರ ಮಾತಿನಲ್ಲಿ ನನಗೆ ವಿಶ್ವಾಸವಿಲ್ಲದಂತಾಗಿದೆ. ಸಮಗ್ರ ಕೀಟ ನಿರ್ವಹಣಾ ಪದ್ಧತಿ ನಮ್ಮ ದೇಶಕ್ಕೆ ಅತ್ಯಗತ್ಯವಾಗಿದ್ದು, ಈ ಹಿಂದೆ ನಮ್ಮ ದೇಶದಲ್ಲಿ ಎಲ್ಲಿ ನೋಡಿದರೂ ತೆಂಗು ಬೆಳೆ ಸಮೃದ್ಧವಾಗಿದ್ದಿತು. ಮಾನೋ ಕ್ರಾಪಿಂಗ್‌ನಿಂದ ಅಭಿವೃದ್ಧಿಯಾಗುತ್ತಿದ್ದ ಪ್ಯಾಥೋಜನ್ ಸೆಂಟರ್ಸ್ ಇವೊತ್ತು ಉಳಿಯುವ ಸ್ಥಿತಿಯಲ್ಲಿಲ್ಲ. ಎಲ್ಲಿಯವರೆವಿಗೂ ನಾವು ಇಂಟರ್ ಕ್ರಾಪಿಂಗ್ ಮಾಡಬಹುದು, ಮಲ್ಟಿ ಸ್ಪೀಷಿಸ್

ಮಾಡಬಹುದು ಮತ್ತು ಮಲ್ಚಿ ಫಾರ್ಮಿಂಗ್ ಆ್ಯಕ್ಟಿವಿಟಿ ಮಾಡುವಂಥ ಸಂದರ್ಭದಲ್ಲಿ ಪ್ಯಾಥೋಜನ್ಸ್ ಅನ್ನು ಅಭಿವೃದ್ಧಿಪಡಿಸುವ ಮೂಲಕ ರೋಗ ಸಹಜವಾಗಿ ನಿಯಂತ್ರಣವಾಗಬೇಕು. ಈ ಪ್ರಯೋಗ ಮೆಕ್ಸಿಕೋ ದೇಶದಲ್ಲಿ ನಡೆದಿದೆ. ಅವರು ಈ ದಿಸೆಯಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿನತ್ತ ಸಾಗಿದ್ದು, ಅಲ್ಲಿನ ಪದ್ಧತಿಯನ್ನು ನಾವೂ ಸಹ ಅನುಸರಿಸಬೇಕಾಗುತ್ತದಾದ್ದರಿಂದ ಸಮಗ್ರ ಕೀಟ ನಿರ್ವಹಣಾ ಪದ್ಧತಿ ಬಗ್ಗೆ ನಾವು ಒತ್ತು ಕೊಡಬೇಕಾಗುತ್ತದೆ. ಇಲಾಖಾಧಿಕಾರಿಗಳೊಂದಿಗೆ ಈಗಾಗಲೇ ಈ ಕುರಿತಂತೆ ಚರ್ಚಿಸಿದ್ದು ಇಂಟರ್ ಕ್ರಾಪಿಂಗ್‌ಗೆ ಯಾವ್ಯಾವ ಬೆಳೆ ಹಾಕಬಹುದೆಂಬ ಬಗ್ಗೆ ರೈತರಿಗೆ ಸಲಹೆ ಕೊಡುವ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಈ ರೀತಿ ಮಾಡುವಾಗ ರೋಗವನ್ನು ಸ್ವಾಭಾವಿಕವಾಗಿ ನಿಯಂತ್ರಿಸುವುದಕ್ಕೆ ಸಾಧ್ಯವಾಗುತ್ತದೆ. ಮಾತನಾಡಿರುವ ಅನೇಕ ಮಾನ್ಯ ಸದಸ್ಯರು ರೋಗ ನಿಯಂತ್ರಿಸುವುದಕ್ಕೆ ಯಾವ ರೀತಿಯಾದ ವಿಧಾನವಿದೆ? ಸಂಶೋಧನೆ ನಡೆಸಿದ್ದೀರಾ, ಮುಂತಾಗಿ ಕೇಳಿರುವುದಕ್ಕೆ ಹೇಳುವುದಾದರೆ, ಸಂಪೂರ್ಣ ಜವಾಬ್ದಾರಿ ಹೊತ್ತಿರುವ ತೆಂಗು ಅಭಿವೃದ್ಧಿ ಮಂಡಳಿ ಇದೆಯಲ್ಲದೆ, ಕಾಸರಗೋಡಿನಲ್ಲಿ ಸಿ.ಪಿ.ಸಿ.ಆರ್.ಐ. ಸಂಸ್ಥೆಯಿದ್ದು, ಅವರು ಹಾಗೂ ನಮ್ಮ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಸೇರಿಕೊಂಡು ರೋಗ ನಿಯಂತ್ರಿಸಲು ಯಾವ ರೀತಿಯಾದ ಸಂಶೋಧನೆ ನಡೆಸಬೇಕೆನ್ನುವುದಕ್ಕೆ ಸಲಹೆಗಳನ್ನು ಕೊಟ್ಟಿದ್ದಾರೆ. ನುಸಿರೋಗಕ್ಕೆ ಬಾಧಿತವಾಗಿರುವ ತೆಂಗಿನ ಮರಗಳಿಗೆ ಮಾನೊಪ್ರೊಟೋಫಾಸ್ ಡೈಕೊಫಾಲ್ ಅಥವಾ ಎಂಡೋಸಲ್ಫಾನ್ ಕೊಡಬೇಕೆಂಬುದು ಮೊದಲನೆ ವರ್ಷದಲ್ಲಿ ಇತ್ತು. ಆದರೆ, ಈಗ ಸಿ.ಪಿ.ಸಿ.ಆರ್.ಐ.ನವರು ಹೇಳುತ್ತಿರುವುದೇನೆಂದರೆ, ಮೊದಲನೆಯ ಡೋಸ್ ಆಗಿ ಮಾನೊಪ್ರೊಟೋಫಾಸ್ ಕೊಟ್ಟು, ಎರಡನೆಯ ಹಾಗೂ ಮೂರನೇ ಚಿಕಿತ್ಸೆಯಾಗಿ ಅಜಾಡಿರ್ಯಾಕ್ಟಿನ್ ಎಂಬ ಬಯೋ ಪೆಸ್ಟಿಸೈಡ್ಸ್ ಅನ್ನು ಕೊಟ್ಟರೆ ನಿಯಂತ್ರಿಸಲು ಸಾಧ್ಯವಾಗುತ್ತದೆಂಬುದು. ಈ ರೋಗವನ್ನು ನಿಯಂತ್ರಣ ಮಾಡಬಹುದು ಅಂದರೆ ನಾವು ಒಂದು ಮರಕ್ಕೆ ಟ್ರೀಟ್‌ಮೆಂಟ್ ಮಾಡಿದರೆ ರೋಗವನ್ನು ಕಂಟ್ರೋಲ್ ಮಾಡಬಹುದು. ಆದರೆ ಸ್ವಲ್ಪ ದಿವಸಗಳ ನಂತರ ಮತ್ತೆ ಆ ರೋಗ ಹರಡುವುದಕ್ಕೆ ಸಾಧ್ಯತೆ ಇದೆ. ನಮಗೆ ಮುಖ್ಯವಾಗಿರತಕ್ಕಂಥ ತೊಂದರೆ ಏನೆಂದರೆ ರೋಗ ಬಂದಿರತಕ್ಕಂಥ ಏರಿಯಾದಲ್ಲಿ ಏಕಕಾಲಕ್ಕೆ ಟ್ರೀಟ್‌ಮೆಂಟ್ ಮಾಡುವಂಥಾದ್ದನ್ನು ಮಾಡಿ ಆ ರೋಗದ ಪಾಪ್ಯುಲೇಷನ್ ಕಡಿಮೆ ಮಾಡತಕ್ಕಂಥಾದ್ದು ಬಹಳ ಮುಖ್ಯ. ಅದರ ಕಡೆ ನಾವು ಗಮನ ಕೊಡಬೇಕಾಗುತ್ತದೆ. ಕೀಟಗಳನ್ನು ಕಡಿಮೆ ಮಾಡಬೇಕಾಗುತ್ತದೆ. ನಮ್ಮ ಇಡೀ ಜಿಲ್ಲೆಯಲ್ಲಿ ತಾಲ್ಲೂಕಿನ ತಹಶೀಲ್ದಾರ್ಸ್ ಮತ್ತು ತಾಲ್ಲೂಕಿನ ಎಕ್ಸಿಕ್ಯೂಟಿವ್ ಆಫೀಸರ್ಸ್‌ನ್ನು ಇಟ್ಟು ಟಾಸ್ಕ್‌ಫೋರ್ಸ್ ಮಾಡಿ ಸಾಕಷ್ಟು ಜವಾಬ್ದಾರಿಕೆಯನ್ನು ಕೊಟ್ಟು ಔಷಧಿಯನ್ನು ಕೊಟ್ಟು ಕೆಲಸವನ್ನು ಮಾಡಿದರೂ ಕೂಡ ಈ ರೋಗವನ್ನು ತಡೆಗಟ್ಟಲು ಆಗಲಿಲ್ಲ. ಸುಮಾರು 80 ಲಕ್ಷದಿಂದ ಒಂದು ಕೋಟಿ ಮರಗಳು ಅಫೆಕ್ಟ್ ಆಗಿವೆ. ಆ ಎಲ್ಲಾ ಮರಗಳಿಗೂ ಕೂಡ ನಾವು ಇಲಾಖೆಯಿಂದ ಟ್ರೀಟ್‌ಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ರೈತರ ಸಹಯೋಗದಿಂದಲೇ ನಾವು ಟ್ರೀಟ್‌ಮೆಂಟ್ ಮಾಡಬೇಕಾಗುತ್ತದೆ. ಅದನ್ನು ರೂಟ್‌ಗೆ ಟ್ರೀಟ್‌ಮೆಂಟ್ ಮಾಡಬೇಕಾದರೆ ಒಬ್ಬ ಮನುಷ್ಯ

ಒಂದು ದಿನಕ್ಕೆ 3ರಿಂದ 5 ಗಿಡ ಮಾಡಬಹುದೇ ವಿನಹ ಅದಕ್ಕಿಂತ ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾವ ಕೆಲವು ಕಡೆ ರೈತರ ಸಹಯೋಗದಿಂದ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ನಾವು ಕೊಟ್ಟಿರತಕ್ಕಂಥ ಹಣದಲ್ಲಿ ಶೇಕಡ 90ರಷ್ಟು ಹಣ ಖರ್ಚು ಮಾಡಿ ಆ ರೋಗವನ್ನು ನಿಯಂತ್ರಣದಲ್ಲಿಡತಕ್ಕಂಥ ಕೆಲಸವನ್ನು ಮಾಡಿದ್ದೆವು. ಆದರೂ ಕೂಡ ಆ ಟ್ರೀಟ್‌ಮೆಂಟ್‌ನ್ನು ಏಕಕಾಲಕ್ಕೆ ಎಲ್ಲಾ ಮರಗಳಿಗೂ ಮಾಡದೇ ಇರುವ ಕಾರಣ ಆ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಆಗಲಿಲ್ಲ. ಇದರ ಜೊತೆಗೆ ಅನೇಕ ಜನ ಮಾನ್ಯ ಸದಸ್ಯರು ಕಪ್ಪು ತಲೆ ಹುಳುಗಳ ಬಗ್ಗೆ ಹೇಳಿದರು. ಕಪ್ಪು ತಲೆ ಹುಳಗಳ ರೋಗ ಮತ್ತು ಈ ನುಸಿ ರೋಗ ಎರಡೂ ಸೇರಿ ತೆಂಗು ಬೆಳೆಯತಕ್ಕಂಥವರಿಗೆ ತೊಂದರೆಯಾಗಿದೆ. ಇದನ್ನು ನಾನೂ ಕೂಡ ನೋಡಿದ್ದೇನೆ. ಆದರೆ ಈ ರೋಗವನ್ನು ಯಾವ ರೀತಿ ನಿಯಂತ್ರಣ ಮಾಡುವುದು ಎನ್ನುವುದು ಬಹಳ ಮುಖ್ಯ. ಇದರ ಜೊತೆಗೆ ನಾನು ಈಗಾಗಲೇ ಬಯೋ ಟೆಕ್ನಾಲಜಿಯ ಬಗ್ಗೆ ಸಹ ಚರ್ಚೆ ಮಾಡಿದ್ದೇನೆ. ದೆಲ್ಲಿಯಿಂದ ಬಂದಿರತಕ್ಕಂಥ ಶ್ರೀ ವೈ.ಎಸ್.ರಾವ್ ಅವರು ಬಂದಂತಹ ಸಂದರ್ಭದಲ್ಲಿ ಸಹ ಇವತ್ತು ಜೆನಿಟಿಕಲಿ ಅದಕ್ಕೆ ಏನಾದರೊಂದು ಪರಿಹಾರ ಕಂಡು ಹಿಡಿಯುವ ಬಗ್ಗೆ ಮತ್ತು ಬೈಯೋ ಟೆಕ್ನಾಲಜಿ ಬಗ್ಗೆ ಸಹ ನಾವು ಚರ್ಚೆ ಮಾಡಿದ್ದೇವೆ. ಮತ್ತು ಬಹಳ ಮುಖ್ಯವಾಗಿರತಕ್ಕಂಥಾದ್ದುWe are exposed to W.T.O. ನಾವು ಈಗ ಗ್ಲೋಬಲೈಜೇಷನ್ ವ್ಯಾಪ್ತಿಯಲ್ಲಿ ಬಂದಿರಬೇಕಾದರೆ ಮುಖ್ಯವಾಗಿರತಕ್ಕಂಥ ಈ ರೋಗಗಳು ಹೇಗೆ ಬರುತ್ತವೆ ಎನ್ನುವುದು ನಮಗೂ ಅರ್ಥವಾಗುವುದಿಲ್ಲ. ದಿನ ದಿನಕ್ಕೂ ಹೊಸ ಹೊಸ ರೋಗಗಳು ಬಂದಿರತಕ್ಕಂಥಾದ್ದನ್ನು ನೋಡಿದ್ದೇವೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ನಾವು ಹಾಕಿರುವಂತಹ ಗಿಡಕ್ಕೆ ನೆಮಟೋಟ್ಸ್ ಬಂದು ಎಲ್ಲಾ ಸಂಪೂರ್ಣವಾಗಿ ನಾಶವಾಗಿದೆ. ಅಂದರೆ ನೆಮಟೋಟ್ಸ್ ಎನ್ನುವಂಥದ್ದು ನಮ್ಮ ವಿಜ್ಞಾನಿಗಳಿಗೆ ಗೊತ್ತಿಲ್ಲ. ನಮ್ಮ ದಕ್ಷಿಣ ಭಾರತದಲ್ಲಿ ಎಲ್ಲೂ ನೋಡಿಲ್ಲ. ಈಗ ಪಾವಗಡದಲ್ಲಿ ಬಂದಿರತಕ್ಕಂಥ, ಒಂದು ರೋಗ ಅಂದರೆ ಸ್ಪೆಂನೆಕ್ರೋಸಿಸ್. ಈ ರೋಗದಿಂದ ಆಂಧ್ರಪ್ರದೇಶದಲ್ಲಿ ಸುಮಾರು 300 ಕೋಟಿ ರೂಪಾಯಿಗಳ ಬೆಳೆ ಹಾಳಾಗಿದ್ದನ್ನು ನಾವು ಕಂಡಿದ್ದೇವೆ. ಇದಕ್ಕೆ ನಾವು ಏನು ಮಾಡಬೇಕು ಅಂದರೆ ನಮ್ಮಲ್ಲಿ ಕಾಣತಕ್ಕಂಥ ಪಾರ್ಥೇನಿಯಂ ಎನ್ನತಕ್ಕಂಥಾದ್ದು ಏನು ಇದೆ ಅದು ಈ ಎಲ್ಲಾ ರೋಗಗಳಿಗೂ ರಿಸರ್ವಾಯರ್. ಈ ಎಲ್ಲಾ ರೋಗಗಳು ಬರುವುದು ಈ ಪಾರ್ಥೇನಿಯಂನಿಂದ. ಅದು ನೆಮಟೋಟ್ಸ್ ಇರಲಿ, ಸ್ಪೆಂನೆಕ್ರೋಸಿಸ್ ಇರಲಿ, ಈ ಪಾರ್ಥೇನಿಯಂನ್ನು ನಾವು ಮೊದಲು ನಿರ್ಮೂಲನೆ ಮಾಡಬೇಕು. ಇದಕ್ಕೆ ನಾವು ರೈತರಿಗೆ ಸಾಕಷ್ಟು ಮಾಹಿತಿಯನ್ನು ಕೊಟ್ಟು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಸ್ವಲ್ಪಮಟ್ಟಿಗೆ ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗಿದೆ. ಈ ಕ್ವಾರನ್‌ಟೈನ್ ಬಗ್ಗೆ ಹೇಳಬೇಕಾದರೆ, ಆಮೇಲೆ ವಿಶೇಷವಾಗಿ ನಮ್ಮಲ್ಲಿ ವಸ್ತುಗಳು ಆಮದು ಆಗುತ್ತದೆ, ರಫ್ತು ಆಗುತ್ತದೆ. ನಮ್ಮ ವಸ್ತುಗಳು ಹೊರದೇಶಕ್ಕೆ ರಫ್ತಾಗುವಂತಹ ಸಂದರ್ಭ ಬಂದಾಗ ಕ್ವಾರನ್‌ಟೈನ್‌ನಲ್ಲಿ ವ್ಯಾಲೀಡ್ ಸರ್ಟಿಫಿಕೇಟ್ಸ್‌ನ್ನು ಕೇಳುತ್ತಾರೆ. ಆದರೆ ಬೇರೆ ದೇಶಗಳಿಂದ ಬರುವಂತಹ ಸಂದರ್ಭದಲ್ಲಿ ಅದನ್ನು

ಟೆಸ್ಟ್ ಮಾಡುವಂತಹ ಲ್ಯಾಬ್ಸ್ ಸಹ ನಮ್ಮ ದೇಶದಲ್ಲಿ ಹೆಚ್ಚಾಗಿ ಆಗಿಲ್ಲ. ಮತ್ತು ಅದರ ಬಗ್ಗೆ ನಾವು ಒಂದು ಕಾನೂನು ಮಾಡಬೇಕಾಗುತ್ತದೆ. ನಾವು ಆ ಕಾನೂನಿನಲ್ಲಿ ಇದನ್ನು ಒಳಪಡಿಸಿ ಮಾಡಬೇಕಾಗುತ್ತದೆ. ಇವತ್ತು ಕ್ವಾರಂನ್‌ಟೈನ್ ಇಲ್ಲದೇ ನಮ್ಮ ದೇಶಕ್ಕೆ ಬರತಕ್ಕಂಥಾದ್ದರ ಬಗ್ಗೆ ನಾವು ಹೆಚ್ಚು ಗಮನ ಹರಿಸದಿದ್ದರೆ ಬಹುಶಃ ಇಂತಹ ರೋಗಗಳು ನಮ್ಮ ದೇಶಕ್ಕೆ ಒಂದಲ್ಲ, ಹತ್ತಲ್ಲ, ನೂರಾರು ರೋಗಗಳು ಬರುವುದಕ್ಕೆ ಸಾಧ್ಯವಾಗುತ್ತದೆ. ಈ ರೋಗ ಕೇವಲ 7-8 ದಿವಸಗಳಲ್ಲಿ ಮಲ್ಟಿಫೈ ಆಗುತ್ತದೆ. ಆ ರೋಗ ಒಂದು ಮರದಲ್ಲಿ ಇದ್ದರೆ ಅದು ಮಿಲಿಯನ್ಸ್‌ನಲ್ಲಿ ಮಲ್ಟಿಫೈ ಆಗಿ ಅದು ಬಹಳ ಬೇಗ ಎಷ್ಟು ದೂರವಾದರೂ ಸರಿ ಹೋಗುತ್ತದೆ. ಈ ರೋಗಗಳನ್ನು ನಾವು ನಿಯಂತ್ರಣ ಮಾಡಬೇಕಾದರೆ ಬಹಳಷ್ಟು ಕಷ್ಟವಿದೆ. ಮೊನ್ನೆ ಕೆಲವು ವಿಜ್ಞಾನಿಗಳು ಐ.ಸಿ.ಆರ್.ನಿಂದ ಬಂದಿದ್ದರು, ಅವರು ಕೆಲವು ಸಲಹೆಗಳನ್ನು ನೀಡಿದರು. ನಾವು ಯಾವುದೇ ತರಹದ ಒಂದು ಟ್ರೀಟ್‌ಮೆಂಟ್‌ನ್ನು ಮಾಡದೆ ಒಂದು ಅಥವಾ ಎರಡು ವರ್ಷ ಬಿಟ್ಟು ಬಿಟ್ಟರೆ, ಬಹುಶಃ ನ್ಯಾಚುರಲ್ ಆಗಿ ಪ್ಯಾಥೋಜೆನ್ಸ್ ಡೆವಲಪ್ ಆಗಿ ಅದನ್ನು ಕಂಟ್ರೋಲ್ ಮಾಡಲು ಸಾಧ್ಯವಾಗುತ್ತದೆ ಎಂಬ ಸಲಹೆಯನ್ನು ಕೊಟ್ಟಿದ್ದಾರೆ. ಇವತ್ತು ಕೇರಳದಲ್ಲಿ ಸಾಕಷ್ಟು ಹಣ ಖರ್ಚು ಮಾಡಿ ಆ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಆಗದೇ ಅದನ್ನು ಹಾಗೆಯೇ ಬಿಟ್ಟು ಬಿಟ್ಟದ್ದರಿಂದ ಅದು ಹಾಗೆಯೇ ಕಡಿಮೆಯಾಗುತ್ತಿರುವುದನ್ನು ನೋಡಿದ್ದಾರೆ. ಅಂದರೆ ಇದಕ್ಕೆ ಸರಿಯಾದ ಕ್ರಮ ಏನು? ಇದನ್ನು ಯಾವ ರೀತಿ ನಿಯಂತ್ರಣ ಮಾಡಬಹುದು ಎನ್ನುವ ಬಗ್ಗೆ ಇನ್ನೂ ಪ್ರಯೋಗದ ಹಂತದಲ್ಲಿದೆ. ನಾವು ಅವರನ್ನು ನೋಡಿ ಇವರನ್ನು ನೋಡಿ ಕಲಿಯುವಂತಹ ಹಂತದಲ್ಲಿದ್ದೇವೆ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕೂಡ ನಾವು ವಿಶೇಷವಾಗಿ ಇದಕ್ಕೆ ಒಂದು ಗುರಿಯನ್ನು ಇಟ್ಟು ಅದಕ್ಕೆ ಟೈ ಅಫ್ ಆಗಬೇಕು, ಮತ್ತು ನಮ್ಮ ರೈತರು, ಮಾನೀಟರಿಂಗ್ ಏಜನ್ಸಿಗಳು, ಅನೇಕ ಪರ್ಯಾಯವಾದ ವ್ಯವಸ್ಥೆಗಳನ್ನು ಮಾಡಿ ಆ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ತಾಂತ್ರಿಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವೆಲ್ಲವೂ ಸಹ ಸರ್ಕಾರದ ಪರಿಶೀಲನೆಯಲ್ಲಿದೆ. ನಮ್ಮ ಯೂನಿವರ್ಸಿಟಿಗಳಿಗೆ ಅವುಗಳನ್ನು ಕಳುಹಿಸಿ ನೋಡಿಸಿ ಅದಕ್ಕೆ ಹೆಚ್ಚು ಒತ್ತು ಕೊಟ್ಟು ರೀಸರ್ಚ್ ಮಾಡತಕ್ಕಂಥ ಕೆಲಸವನ್ನು ಈಗಾಗಲೇ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈಗ ಬಹಳ ಚರ್ಚೆಯಾಗಿರತಕ್ಕಂಥಾದ್ದು ಎಂದು ಹೇಳಿದರೆ ನೀರಾ ತೆಗೆಯುವಂಥಾದ್ದು ಒಂದು ಪರ್ಯಾಯ ವ್ಯವಸ್ಥೆ ಆಗಬೇಕು ಎನ್ನುವಂಥಾದ್ದು. ನೀರಾ ತೆಗೆಯುವುದು ತೆಂಗಿನ ಮರದಲ್ಲಿ ಹೊಂಬಾಳೆ ಏನು ಬರುತ್ತದೆ ಅದರಿಂದ ನೀರಾ ತೆಗೆಯುವಂಥಾದ್ದು, ನೀರಾ ತೆಗೆಯುವುದರಿಂದ ರೈತನ ದೃಷ್ಟಿಗೆ ಅದು ಸ್ವಲ್ಪ ಲಾಭದಾಯಕವಾಗಿರಬಹುದು, ಆದರೆ ನಾವು ಎಲ್ಲಾ ಕಾಲಕ್ಕೂ ಎಲ್ಲಾ ಮರಗಳಿಗೂ ನೀರಾ ಕಟ್ಟಲು ಸಾಧ್ಯವೇ ಎನ್ನುವುದನ್ನೂ ಸಹ ಯೋಚನೆ ಮಾಡಬೇಕಾಗುತ್ತದೆ. ಎಲ್ಲರ ಒತ್ತಾಯವೇನೆಂದರೆ, ನೀರಾ ಇಳಿಸಲು ಅವಕಾಶ ಮಾಡಿಕೊಡಬೇಕೆನ್ನುವುದು. ಅದಕ್ಕೆ ನಾನು ಒಂದು ಮಾತನ್ನು ಹೇಳುತ್ತೇನೆ, ನೀರಾ ಇಳಿಸುವಂಥಾದ್ದು 6-00 ಗಂಟೆ ಒಳಗಾಗಿ ಅಥವಾ ರಾತ್ರಿ ಇಳಿಸಬೇಕು. ಆದರೆ ಸೂರ್ಯನ ಬಿಸಿಲು ಬಿದ್ದ ತಕ್ಷಣ ಫರ್ಮೆಂಟೇಷನ್ ಆಗಿ ಟಾಡಿಯಾಗುತ್ತದೆ. ಅದು ಟಾಡಿಯಾದಾಗ ಸುಮಾರು 4 ಪರ್ಸೆಂಟ್ ಆಲ್ಕೋಹಾಲ್ ಆಗಿ

ಡೆವಲಪ್ ಆಗುತ್ತದೆ. ನೀರಾ ಕುಡಿದರೆ ನಮ್ಮ ಆರೋಗ್ಯಕ್ಕೆ ಒಳ್ಳೆಯದು ಎನ್ನುವುದನ್ನು ನಮ್ಮ ಪೂರ್ವಿಕರೂ ಸಹ ಕಂಡುಹಿಡಿದುಕೊಂಡು ಬಂದಿದ್ದಾರೆ. ಅನೇಕರು ಅದನ್ನು ಅನುಭವಿಸುತ್ತಾ ಇರುವುದನ್ನು ನಾವು ನೋಡಿದ್ದೇವೆ. ನಮ್ಮ ರಾಜ್ಯದ ಅನುಭವ ಏನೆಂದರೆ ನಮ್ಮ ರಾಜ್ಯದಲ್ಲಿ ಸಾಕಷ್ಟು ಈಚಲು ಮರ ಇತ್ತು. ಆ ಈಚಲು ಮರದಿಂದ ಬರತಕ್ಕಂಥ ನೀರಾ ಇರಬಹುದು, ಹೆಂಡ ಇರಬಹುದು ಅದನ್ನು ಎಲ್ಲರೂ ಉಪಯೋಗಿಸುತ್ತಿದ್ದರು. ಕ್ರಮೇಣ ಅದು ಏನಾಯಿತು ಅಂದರೆ ಆ ಈಚಲು ಮರ ಸಂಪೂರ್ಣವಾಗಿ ನಾಶವಾಗಿ ಹೋಯಿತು. ಏತಕ್ಕೆ ಹಾಳಾಯಿತು ಅಂದರೆ ನಮ್ಮ ಜನಗಳಲ್ಲಿ ಒಂದು ನಂಬಿಕೆ ಎಲ್ಲಿ ಈಚಲು ಮರ ಇರುತ್ತದೆಯೋ ಅಲ್ಲಿ ತೆಂಗು ಚೆನ್ನಾಗಿ ಬರುತ್ತದೆ ಎನ್ನುವ ಒಂದು ಭಾವನೆಯಿಂದ ಎಲ್ಲಾ ಈಚಲು ಮರ ಕಡಿದು ತೆಂಗು ಬೆಳೆಸತಕ್ಕಂಥ ಕೆಲಸವನ್ನು ಮಾಡಿ ಈಚಲು ಮರ ನಮ್ಮ ರಾಜ್ಯದಿಂದ ಸಂಪೂರ್ಣವಾಗಿ ಕಣ್ಮರೆ ಆಗಿದೆ. ಆದರೆ ಬೇರೆ ಬೇರೆ ರಾಜ್ಯದಲ್ಲಿ ಈಚಲು ಮರ ಇನ್ನೂ ಇದೆ. ನಮ್ಮ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿದೆ. ನಮ್ಮ ರಾಜ್ಯದಲ್ಲಿಯೂ ಸಹ ಕೆಲವು ಭಾಗಗಳಲ್ಲಿದೆ. ನಮ್ಮ ರಾಜ್ಯದಲ್ಲಿ ಟಾಡಿ ಮತ್ತು ಅರ್ರ್ಯಾಕ್ ಜೊತೆ ಜೊತೆಯಲ್ಲಿಯೇ ಆಕ್ಷನ್ ಮಾಡುವಂಥ ವ್ಯವಸ್ಥೆ ಇತ್ತು. ಆದರೆ ನಮ್ಮ ಅನುಭವ ಏನಾಗಿದೆ? ನಮ್ಮಲ್ಲಿ ಮರ ಇಲ್ಲದಿದ್ದರೂ ಕೂಡ ಎಲ್ಲಾ ತಾಲ್ಲೂಕಿನಲ್ಲಿ ಟಾಡಿ ನೋಡುತ್ತಿದ್ದರು. ಎಲ್ಲಾ ತಾಲ್ಲೂಕುಗಳಲ್ಲಿ ಟಾಡಿಯನ್ನು ಮಾಡುತ್ತಿದ್ದರು. ಹೇಗೆ ಮಾಡುತ್ತಿದ್ದರು ಎನ್ನತಕ್ಕಂಥಾದ್ದು ಎಲ್ಲರಿಗೂ ಗೊತ್ತಿರತಕ್ಕಂಥಾದ್ದು. ನಮ್ಮ ಮಾನ್ಯ ಸದಸ್ಯರಾದ ಬೈರೇಗೌಡರು ಸಾಕಷ್ಟು ರೀತಿಯಲ್ಲಿ ಆ ಬಗ್ಗೆ ವಾದವನ್ನು ಮಾಡುತ್ತಿದ್ದರು. ಮಾನ್ಯ ಸಿಂಧ್ಯಾರವರಿಗೂ ಗೊತ್ತಿದೆ. ಕ್ಲೋರೋಹೈಡ್ರೇಟ್ ಪೌಡರನ್ನು ಮಿಕ್ಸ್ ಮಾಡಿ ಟಾಡಿ ತಯಾರು ಮಾಡುತ್ತಿದ್ದರು. ಇದು ಮನುಷ್ಯರನ್ನು ಕೊಲ್ಲುತ್ತಿತ್ತು. ಕ್ಲೋರಲ್ ಹೈಡ್ರೇಟ್‌ನಿಂದ ಮಾಡಿದಾಗ ಅದನ್ನು ಕುಡಿದು ಮನುಷ್ಯ ಐದು ವರ್ಷಗಳಲ್ಲಿ ಕಣ್ಣು ಕಳೆದುಕೊಳ್ಳುತ್ತಿದ್ದ. ಮತ್ತು 35-40 ವರ್ಷಕ್ಕೆ ಅವನು ಸತ್ತು ಹೋಗುತ್ತಿದ್ದ. ಈ ಪ್ರಸಂಗಗಳನ್ನು ನೋಡಿ ಇದು ಬೇಡ ಎನ್ನುವ ಕಾರಣಕ್ಕೋಸ್ಕರ ಇವತ್ತು ನಮ್ಮ ಹಿಂದಿನ ಕಾಂಗ್ರೆಸ್ ಸರ್ಕಾರ 1989ರಲ್ಲಿದ್ದಾಗ ಆ ಸೇಂದಿಯನ್ನು ಸಂಪೂರ್ಣವಾಗಿ ತೆಗೆದು ಹಾಕಿದರು. ಆಗಲೂ ಸಹ ಕೆಲವು ತಾಲ್ಲೂಕುಗಳಲ್ಲಿ ಉಳಿಸಿದ್ದೆವು. ದಕ್ಷಿಣ ಕನ್ನಡ ಮತ್ತು ಉಡುಪಿ ಎರಡು ತಾಲ್ಲೂಕುಗಳಲ್ಲಿ ಉಳಿಸಿದ್ದರು. ಆ ಎರಡು ಜಿಲ್ಲೆಗಳಲ್ಲಿ ಸೇರಿ ಸುಮಾರು 20 ಸಾವಿರ ಲೀಟರ್ ಟ್ಯಾಪಿಂಗ್ ಆಗುತ್ತಿತ್ತು.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು(ಶ್ರೀ ಎಂ.ವಿ.ವೆಂಕಟಪ್ಪ)ನವರು ಪೀಠವನ್ನು ಅಲಂಕರಿಸಿದರು)

ಎರಡು ಜಿಲ್ಲೆಗಳಲ್ಲಿ ಸುಮಾರು 20 ಸಾವಿರ ಮರಗಳಲ್ಲಿ ಟ್ಯಾಪಿಂಗ್ ಮಾಡುತ್ತಿದ್ದು, ಇದಕ್ಕಾಗಿ ಅಲ್ಲಿ 25-30 ಟ್ಯಾಪರ್ಸ್ ಸೊಸೈಟಿಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ನಾವು ಇವತ್ತು ಟ್ಯಾಪರ್ಸ್ ಸೊಸೈಟಿಗಳನ್ನು ನೋಡಬಹುದೇ ವಿನಃ ಅವುಗಳು ಬೇರೆ ಎಲ್ಲೂ ಕೂಡ ಇಲ್ಲ. ಟ್ಯಾಪರ್ಸ್‌ಗಳನ್ನೂ ಕೂಡ ನಾವು ಇವತ್ತು ಎಲ್ಲೂ ಕೂಡ ಕಾಣುತ್ತಿಲ್ಲ. ಆ ಟ್ಯಾಪರ್ಸ್‌ಗೋಸ್ಕರ

ಅಲ್ಲಿ ಟ್ಯಾಪಿಂಗ್ ಮಾಡುವುದನ್ನು ನಾವು ಮುಂದುವರೆಸಿದೆವು. ಅಲ್ಲಿ ಪಾಗಣಿ ಇದೆ ಮತ್ತು ತೆಂಗೂ ಕೂಡ ಇದೆ. ಇವೆರಡರಿಂದ ನೀರಾವನ್ನು ಇಳಿಸಿ ಅಲ್ಲಿ ಅದನ್ನು ಉಪಯೋಗಿಸತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸೇಂದಿ ಇಳಿಸಲು ಅನುಮತಿ ಕೊಟ್ಟಾಗ ಅಲ್ಲಿ ಕ್ಲೋರಲ್ ಹೈಡ್ರೇಟ್ ಬೆರೆಸಿ ಮಾರಾಟ ಮಾಡುವುದು ನಡೆಯುತ್ತಿದ್ದುದರಿಂದ ಕೇವಲ ನಾಲ್ಕು ತಿಂಗಳ ಹಿಂದೆ ಅಲ್ಲಿ ನೀಡಿದ್ದ ಅನುಮತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಹಿಂತೆಗೆದುಕೊಳ್ಳುವ ನಿರ್ಧಾರವನ್ನು ಬಜೆಟ್‌ನಲ್ಲಿ ಪ್ರಕಟಿಸಿರುವುದನ್ನು ವಿರೋಧ ಪಕ್ಷಗಳ ಸಾಲಿನಲ್ಲಿ ಕುಳಿತಿರುವ ಮುಖಂಡರುಗಳು ಮುಕ್ತ ಕಂಠದಿಂದ ಸ್ವಾಗತ ಮಾಡಿದ್ದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಕ್ಲೋರಲ್ ಹೈಡ್ರೇಟ್ ಹಾವಳಿ ಅಲ್ಲಿ ಹೆಚ್ಚಾಗಿ ಅಲ್ಲಿ ಜನಜೀವನಕ್ಕೆ ತೊಂದರೆಯಾಗುತ್ತಿದ್ದುದನ್ನು ಸರ್ಕಾರ ತನ್ಮೂಲಕ ತಪ್ಪಿಸಿದೆ. ನೀರಾ ಮತ್ತು ಹೆಂಡದ ಬಗ್ಗೆ ಹೇಳುವುದಾದರೆ, ನೀರಾ ಎಂಬುದು ನೀರಾ ಅಂತೂ ಅಲ್ಲ, ನೀರಾ ಎಂದು ನಾವು ಚರ್ಚೆ ಮಾಡುವುದಕ್ಕಿಂತಲೂ ಅದನ್ನು ನಾವು 'ಸೇಂದಿ' ಅಥವಾ 'ಹೆಂಡ' ಎಂದು ಚರ್ಚೆ ಮಾಡುವುದು ಒಳ್ಳೆಯದು. ನೀರಾವನ್ನು ಬೆಳಗಿನ ಜಾವವೇ ಇಳಿಸಬೇಕು. ಅದನ್ನು ಬೆಳಗಿನ ಜಾವವೇ ಕುಡಿಯಲಿಕ್ಕೆ ಸಾಧ್ಯವಿಲ್ಲ. ಕಮರ್ಷಿಯಲ್ಲಾಗಿ ಹೋದಾಗ ಅದನ್ನು ಹಗಲು ಹೊತ್ತಿನಲ್ಲೇ ಕುಡಿಯಬೇಕಾಗುತ್ತದೆ, ಆಗ ಅದು ಹೆಂಡ ಆಗುತ್ತದೆಯೇ ವಿನಃ ಇನ್ನೇನೂ ಆಗಲಿಕ್ಕೆ ಸಾಧ್ಯವಿಲ್ಲ. ರೋಗವನ್ನು ನಿಯಂತ್ರಣ ಮಾಡುವುದಕ್ಕಾಗಿ ನೀರಾವನ್ನು ಇಳಿಸಲು ಅನುಮತಿ-ಕೊಡಬೇಕು ಎಂದು ವಾದಿಸಲಾಗುತ್ತಿದೆ. ನನ್ನ ಅನುಭವದ ಮಾತೊಂದನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಹಿಂದಿನ 20 ವರ್ಷಗಳ ಅಂಕಿಅಂಶಗಳನ್ನು ನೋಡಿದಾಗ ಟಾಡಿ ಮತ್ತು ಅರ್ರ್ಯಾಕ್ ಇವೆರಡೂ ಇದ್ದಂತಹ ಸಂದರ್ಭದಲ್ಲಿ ಒಂದು ತಾಲ್ಲೂಕಿಗೆ ಕೇವಲ 5 ಸಾವಿರ ಮರಗಳು ಮಾತ್ರ ಸಾಕಾಗುತ್ತದೆ. 5 ಸಾವಿರ ಮರಗಳಲ್ಲೂ ಕೂಡ ಸೇಂದಿ ಇಳಿಸುತ್ತಿರಲಿಲ್ಲ. ನಾಮಕಾವಸ್ಥೆಗೆ ಇಲಾಖೆಗೆ 500-1000 ಮರಗಳನ್ನು ತೋರಿಸಿ ಎಲ್ಲದಕ್ಕೂ ಕ್ಲೋರಲ್ ಹೈಡ್ರೇಟ್ ಹಾಕಿ ಮಾರಾಟ ಮಾಡತಕ್ಕದ್ದನ್ನು ನಾವು ನೋಡಿದ್ದೇವೆ. ನಮ್ಮಲ್ಲಿರತಕ್ಕಂಥ ವ್ಯವಸ್ಥೆಯಲ್ಲಿ ನಿಜವಾಗಿರತಕ್ಕಂಥ ನೀರಾ ಮತ್ತು ಹೆಂಡವನ್ನು ಕುಡಿಯಲು ಜನಗಳಿಗೆ ಕೊಡಲಿಕ್ಕಾಗುವುದಿಲ್ಲ. ಕಾಂಪಿಟೇಟಿವ್ ಬಿಸಿನೆಸ್‌ನಲ್ಲಿ ಒಂದು ಕಡೆ ಅರ್ರ್ಯಾಕ್ ಇದ್ದಾಗ, ಇನ್ನೊಂದು ಕಡೆ ಟಾಡಿಯನ್ನು ನಾವು ಇಂಟ್ರಡ್ಯೂಸ್ ಮಾಡಿದಾಗ, ವ್ಯಾಪಾರದ ದೃಷ್ಟಿಯಿಂದ ಇವತ್ತು ಕ್ಲೋರಲ್ ಹೈಡ್ರೇಟ್ ಅನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ನಾನು ಬರುವ ಪ್ರದೇಶದಲ್ಲೂ ಸಹಿತ ಸಂಪೂರ್ಣವಾಗಿ ತೆಂಗನ್ನೇ ಬೆಳೆಯುತ್ತಿದ್ದಾರೆ. ನಮ್ಮ ಹಳ್ಳಿಯಲ್ಲೂ ಕೂಡ ನುಸಿ ರೋಗವನ್ನು ನಿಯಂತ್ರಿಸುವ ಸಲುವಾಗಿ ತೆಂಗಿನ ಮರದಿಂದ ಸೇಂದಿ ಇಳಿಸುವ ಕೆಲಸವನ್ನು ಕೆಲವರು ಮಾಡಿದರು. ನಾವು ಏನಾಗುತ್ತದೋ ನೋಡೋಣ ಎಂದು ಅದರ ಬಗ್ಗೆ ಸುಮ್ಮನೆ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದೆವು. ಸುಮಾರು 500-1000 ಮರಗಳಲ್ಲಿ ಅಲ್ಲಿ ಇವತ್ತು ನೀರಾ ಇಳಿಸುವುದಕ್ಕೆ ಶುರು ಮಾಡಿದರು, ಇಳಿಸುವುದಕ್ಕೆ ಶುರು ಮಾಡಿದಾಗ ಲೀಟರ್‌ಗೆ 30 ರೂ.ನಂತೆ ಮಾರಾಟ ಮಾಡುತ್ತಿದ್ದರು. ಸ್ವಲ್ಪ ಇಳಿಸಲು ಜಾಸ್ತಿ ಮಾಡಲು ಶುರು ಮಾಡಿದಾಗ ಅದು ಲೀಟರ್‌ಗೆ 15 ರೂ.ಆಯಿತು. ಲೀಟರ್ 15 ರೂ.ಗೆ ಮಾರಿದರೆ ನಿಮಗೆ ವರ್ಕ್-ಔಟ್

ಆಗುತ್ತದೆಯೇ ಎಂದು ನಾನು ಕೇಳಿದೆ, ಅವರು ಆಗುವುದಿಲ್ಲ ಎಂದು ಹೇಳಿದರು. ಇದಕ್ಕೆ ಕಾರಣವೇನೆಂದರೆ, ನಮ್ಮಲ್ಲಿ ಟ್ಯಾಪರ್ಸ್ ಇಲ್ಲ, ನಮ್ಮಲ್ಲಿರುವ ಟ್ಯಾಪರ್ಸ್ 10-12 ಮರಗಳಿಗೆ ಮಾತ್ರ ಹತ್ತಬಹುದು, ಅದರ ಮೇಲೆ ಜಾಸ್ತಿ ಮರಗಳಿಗೆ ಹತ್ತುವುದಕ್ಕಾಗುವುದಿಲ್ಲ. ಚನ್ನಪಟ್ಟಣ, ಮಂಡ್ಯ ಮತ್ತು ಎಲ್ಲಾ ಕಡೆಗಳಲ್ಲೂ ಕೂಡ ಟ್ಯಾಪರ್ಸ್ ತಮಿಳುನಾಡಿನಿಂದ ಕರೆದುಕೊಂಡು ಬಂದು ಟ್ಯಾಪ್ ಮಾಡುವ ಕೆಲಸ ಮಾಡಿದ್ದಾರೆ. ಟ್ಯಾಪ್ ಮಾಡುವವನು ಮರಕ್ಕೆ 8 ರೂ.ನಂತೆ ಚಾರ್ಜ್ ಮಾಡುತ್ತಿದ್ದಾನೆ. ಇದು ಯಾವ ರೈತರಿಗೂ ಕೂಡ ವರ್ಕ್-ಔಟ್ ಆಗುತ್ತಿಲ್ಲ. ನಾನು 3-4 ದಿವಸಗಳ ಹಿಂದೆ ಊರಿಗೆ ಹೋದಾಗ ಈಗ ಏನು ಮಾಡುತ್ತೀರಿ ಎಂದು ಅಲ್ಲಿನವರನ್ನು ಕೇಳಿದಾಗ ನಾವೇನೂ ಮಾಡುವುದಕ್ಕಾಗುತ್ತಿಲ್ಲ ಎಂದು ಅವರು ಹೇಳಿದರು. ನಾನೂ ಒಬ್ಬ ರೈತ ಕುಟುಂಬದಿಂದ ಬಂದವನಾಗಿ ನನ್ನ ಈ ಅನುಭವದ ಮಾತುಗಳನ್ನು ಹೇಳುತ್ತಿದ್ದೇನೆ. ಇದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಊರಿನವರು ನಮಗೆ ನೀರಾವನ್ನು ಕುಡಿದರೂ ಕೂಡ ಏನೂ ಆಗುತ್ತಿಲ್ಲ, ಮೊದಲು ಏನೋ ಒಂದು ರೀತಿ ಪೌಡರ್ ಹಾಕಿ ಕೊಡುತ್ತಿದ್ದರಲ್ಲಾ, ಅದನ್ನು ಕೊಟ್ಟರೆ ಚೆನ್ನಾಗಿರುತ್ತದೆ ಎಂದು ನನಗೆ ಹೇಳಿದರು. ಒಂದು ಕಡೆ ನಾವು ಬಡವರಿಗೆ ಶೇ.42ರಷ್ಟು ಆಲ್ಕೋಹಾಲ್ ಕಂಟೆಂಟ್ ಇರುವ ಅರ್ರ್ಯಾಕ್ ಕೊಟ್ಟಿದ್ದೇವೆ. ಇನ್ನೊಂದು ಕಡೆ ನೀರಾದಲ್ಲಿ ಶೇ.1ರಷ್ಟು ಮತ್ತು ಟಾಡಿಯಲ್ಲಿ ಶೇ.3ರಷ್ಟು ಆಲ್ಕೋಹಾಲ್ ಇದೆ. ಶೇ.42 ಎಲ್ಲಿ? ಶೇ.3 ಎಲ್ಲಿ? ಅದನ್ನು ಯಾವರೀತಿ ಬದಲು ಮಾಡಬೇಕು? ಅದಕ್ಕಾಗಿ ಕ್ಲೋರಲ್ ಹೈಡ್ರೇಟ್ ಅನ್ನು ಬೆರೆಸಿ ಮಾರಾಟ ಮಾಡುತ್ತಾರೆ. ಇದನ್ನು ನಿಲ್ಲಿಸುವುದಕ್ಕೆ ನಮಗೆ ಯಾವ ರೀತಿಯಾದರೂ ಕೂಡ ಸಾಧ್ಯವಾಗುವುದಿಲ್ಲ. ನಾವು ಒಂದು ಕಡೆ ರೈತರ ಕಷ್ಟವನ್ನು ಒಪ್ಪುತ್ತೇವೆ. ಇನ್ನೊಂದು ಕಡೆ ನಾವು ಜನರ ಆರೋಗ್ಯದ ಕಡೆಗೂ ಕೂಡ ವಿಚಾರ ಮಾಡಬೇಕಾಗುತ್ತದೆ. ಅವರ ಆರೋಗ್ಯದ ದೃಷ್ಟಿಯಿಂದ ನಾವು ಇವತ್ತು ಅನೇಕ ಕಟ್ಟುನಿಟ್ಟಿನ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗುತ್ತದೆ. ನಾವು ಅರ್ರ್ಯಾಕ್ ಅನ್ನು ಇಂಟ್ರಡ್ಯೂಸ್ ಮಾಡಿದ್ದೇವೇಯೇ? ಟ್ರಾಜಡಿ ಆದಂತಹ ಸಂದರ್ಭದಲ್ಲಿ ದೇಸಾಯಿ ಕಮೀಷನ್ ಒಂದು ವರದಿಯನ್ನು ನೀಡಿತು. ಅರ್ರ್ಯಾಕ್ ಅನ್ನು ಸ್ಯಾಚೆಟ್‌ಗಳಲ್ಲಿ ಕೊಡಬೇಕು ಎಂಬ ಸಲಹೆಯನ್ನು ಅದು ನೀಡಿತು. ಸರ್ಕಾರದ ಕಂಟ್ರೋಲ್‌ನಲ್ಲಿ ಇರತಕ್ಕ ಎಂ.ಎಸ್.ಐ.ಎಲ್. ಮೂಲಕ ಸ್ಯಾಚೆಟ್‌ಗಳಲ್ಲಿ ಇವತ್ತು ನಾವು ಅರ್ರ್ಯಾಕ್ ಅನ್ನು ಮಾರಾಟ ಮಾಡುತ್ತಿದ್ದೇವೆ. ಇವತ್ತು ಮಾರಾಟ ಮಾಡತಕ್ಕ ಅರ್ರ್ಯಾಕ್‌ನಲ್ಲಿ ಅಡಲ್ಟ್ರೇಷನ್ ಅನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಸ್ವಲ್ಪ ಜಾಸ್ತಿ ನೀರನ್ನು ಮಿಕ್ಸ್ ಮಾಡಿ ಅಥವಾ ತೂಕದಲ್ಲಿ ಮೋಸ ಮಾಡಿ ಅಡಲ್ಟ್ರೇಷನ್ ಅನ್ನು ಮಾಡಬಹುದೇ ವಿನಃ ಸಂಪೂರ್ಣವಾಗಿ ಅರ್ರ್ಯಾಕ್ ಅನ್ನು ಇವತ್ತಿನ ದಿವಸ ಅಡಲ್ಟ್ರೇಟ್ ಮಾಡುವುದಕ್ಕಾಗುವುದಿಲ್ಲ. ಆದರೆ ಟಾಡಿಯಲ್ಲಿ ಅಡಲ್ಟ್ರೇಷನ್ ಮಾಡುವುದಕ್ಕೆ ಸಾಧ್ಯವಿದೆ. ಇದನ್ನು ಮಾನ್ಯ ವಿರೋಧ ಪಕ್ಷದ ಎಲ್ಲಾ ನಾಯಕರೂ ಕೂಡ ಮನಗಾಣಬೇಕಾಗುತ್ತದೆ. ನಮ್ಮ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಮುಂದಿನ ಮೂರು ವರ್ಷಗಳಲ್ಲಿ ಯಾವ ರೀತಿಯಾಗಿ ಇರುತ್ತದೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಸದನದ ಮುಂದೆ ಮಂಡಿಸಿರುವ ವರದಿಯಲ್ಲಿ ತಿಳಿಸಿದ್ದಾರೆ. ನಾವು ಯಾವ ರೀತಿಯಾದ ಕಡಿವಾಣವನ್ನು ಹಾಕಬೇಕಾಗುತ್ತದೆ ಎಂದು ವರದಿಯಲ್ಲಿ

ತಿಳಿಸಲಾಗಿದೆ. ಬಹುಶಃ ಈ ರೀತಿಯಾದಂತಹ ವರದಿಯನ್ನು ಸದನದಲ್ಲಿ ಮಂಡನೆ ಮಾಡಿರುವುದು ಈ ರಾಜ್ಯದಲ್ಲಿ ಮಾತ್ರ. ಈ ರೀತಿಯಾದ ವರದಿಯನ್ನು ಇತರ ರಾಜ್ಯಗಳಲ್ಲಿ ಮಂಡನೆ ಮಾಡಿದ ನಿದರ್ಶನಗಳನ್ನು ನಾನಂತೂ ಕೇಳಿಲ್ಲ. ಹಣಕಾಸಿನ ವಿಚಾರದಲ್ಲಿ ನಮ್ಮನ್ನು ನಾವು ನಿಯಂತ್ರಿಸಕೊಳ್ಳುವುದು ಅತ್ಯಗತ್ಯವಾಗಿದೆ. ಅನೇಕ ಯೋಜನೆಗಳಿಗೋಸ್ಕರ ಇವತ್ತು ನಮಗೆ ಹಣ ಬೇಕು ಎಂಬುದು ನಿಜ. ಎಲ್ಲಾ ಕಡೆಗಳಲ್ಲೂ ಕೂಡ ಈಗಾಗಲೇ ಟೆಂಡರ್ ಕರೆದು ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗಿದೆ. 'ಆಕ್ಷನ್ ಇಯರ್' ಜುಲೈ 1 ರಿಂದ ಈಗಾಗಲೇ ಪ್ರಾರಂಭವಾಗಿದೆ. ಮುಂದಿನ ಜೂನ್ ತಿಂಗಳಿನವರೆಗೂ ಕೂಡ ನಾವು ಏನೂ ಮಾತನಾಡುವಂತಿಲ್ಲ. ಈ ಮಧ್ಯದಲ್ಲಿ ನೀರಾ ಇಳಿಸಲು ನಾವು ಅವಕಾಶ ಕೊಡುತ್ತೇವೆ ಎಂದು ಹೇಳಿದರೆ, ಇದರ ವಿರುದ್ಧ ಗುತ್ತಿಗೆದಾರರು ಕೋರ್ಟಿಗೆ ಹೋಗಿ ಸ್ಟೇ ತರಬಹುದು. ಹೀಗೇನಾದರೂ ಆದರೆ ನಮಗೆ ಅಬ್ಕಾರಿಯಿಂದ ಬರತಕ್ಕಂಥ 1100 ಕೋಟಿ ರೂ.ಗಳ ಆದಾಯ ಕೂಡ ನಿಂತು ಹೋಗಬಹುದು ಅಥವಾ ಅದು ಬಹಳಷ್ಟು ಕಡಿಮೆಯಾಗಬಹುದು. ಇವತ್ತು ಇಂತಹ ಒಂದು ಪರಿಸ್ಥಿತಿ ನಮ್ಮ ಮುಂದಿದೆ. ಇದು ಆಡಳಿತ ಪಕ್ಷದಲ್ಲಿದ್ದು ಅಧಿಕಾರ ನಡೆಸಿದಂತಹ ಮಾನ್ಯ ಸಿಂಧ್ಯಾರವರಿಗೂ ಸಹ ಗೊತ್ತಿದೆ. ಹೀಗಿರುವಾಗ ನಾವು ಇವತ್ತು ಟಾಡಿ ಅಥವಾ ಸೇಂದಿ ಇಳಿಸಲು ಅನುಮತಿ ನೀಡುವುದು ಸಾಧ್ಯವೇ? ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ ನುಸಿ ರೋಗ ನಿಯಂತ್ರಣಕ್ಕೆ ಪರ್ಯಾಯವಾಗಿ ನಾವೇನಾದರೂ ಮಾಡಬಹುದೇ? ಸಿ.ಎಫ್.ಟಿ.ಆರ್.ಐ. ಮತ್ತು ಡಿಫೆನ್ಸ್ ರೀಸರ್ಚ್ ಇನ್ಸ್‌ಟಿಟ್ಯೂಟ್‌ನವರು ಏನು ಹೇಳಿದ್ದಾರೆ ಎಂದು ಕೇಳಿದರು. ಎಲ್ಲಾ ಕಡೆಯಿಂದಲೂ ಕೂಡ ನೀರಾ ಅಥವಾ ಟಾಡಿಯನ್ನು ಇಳಿಸುವುದು ನುಸಿ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಪರ್ಯಾಯವಾದಂತಹ ಕ್ರಮವಲ್ಲ ಎಂದು ಸ್ಪಷ್ಟವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಎಲ್ಲಾ ತಜ್ಞರು ಮತ್ತು ಇನ್ಸ್‌ಟಿಟ್ಯೂಟ್‌ನವರ ಅಭಿಪ್ರಾಯವೂ ಸಹಾ ಇದೇ ಆಗಿದೆ. ನೀರಾದಿಂದ ಬೈಪ್ರಾಡಕ್ಟ್ ಮಾಡಬಹುದು. ತಂಪಾಗಿರತಕ್ಕ ಪಾನೀಯವನ್ನು ಬೈಪ್ರಾಡಕ್ಟ್ ಆಗಿ ತಯಾರು ಮಾಡಿದಲ್ಲಿ ಅದಕ್ಕೊಂದು ಅರ್ಥ ಬರುತ್ತದೆ. ನಮ್ಮ ಮಕ್ಕಳಿಗೆ ನಾವು ಕೋಕಾ-ಕೋಲಾವನ್ನು ಕುಡಿಸಬಾರದು, ತಂಪಾಗಿರತಕ್ಕ ಪಾನೀಯವನ್ನು ಆರೋಗ್ಯದ ದೃಷ್ಟಿಯಿಂದ ಕುಡಿಸಬೇಕು ಎಂಬುದು ನಿಜ. ಅದರ ಬಗ್ಗೆ ಇವತ್ತು ನಾವು ಸಿ.ಎಫ್.ಟಿ.ಆರ್.ಐ.ನಲ್ಲಿ ಚರ್ಚೆ ಮಾಡಿದ್ದೇವೆ. ನಾನೂ ಕೂಡ ಖುದ್ದಾಗಿ ಅಲ್ಲಿಗೆ ಹೋಗಿ ನೀರಾದಿಂದ ಬೈ ಪ್ರಾಡಕ್ಟ್ ಆಗಿ ತಂಪಾದ ಪಾನೀಯವನ್ನು ತಯಾರಿಸುವ ಸಾಧ್ಯತೆಗಳ ಬಗ್ಗೆ ಸಂಶೋಧನೆ ಮಾಡಬೇಕು ಎಂಬ ಸಲಹೆಯನ್ನು ಕೊಟ್ಟಿದ್ದೇನೆ. ಸರ್ಕಾರದ ವತಿಯಿಂದ ಅವರಿಗೆ ಬೇಕಾಗಿರತಕ್ಕ ಟಾಡಿಯನ್ನೂ ಸಹ ನಾವು ಸಪ್ಲೈ ಮಾಡಿದ್ದೇವೆ. ನಮ್ಮ ಸಲಹೆ ಇನ್ನೂ ಪ್ರಯೋಗದ ಹಂತದಲ್ಲೇ ಇದೆ. ಅದರ ಬಗ್ಗೆ ಅವರ ಅಂತಿಮ ವರದಿ ಬಂದಾಗ ಅದರ ಬಗ್ಗೆಯೂ ಕೂಡ ನಾವು ಪರಿಶೀಲನೆ ಮಾಡುತ್ತೇವೆ. ಬೇರೆ ಬೇರೆ ದೇಶಗಳಲ್ಲಿ ಟಾಡಿಯಿಂದ ಜಾಗರಿ ಮಾಡುತ್ತಾರೆ. ತಮಿಳುನಾಡಿನಲ್ಲೂ ಕೂಡ ಜಾಗರಿ ಮಾಡುತ್ತಾರೆ. ಮೆಕ್ಸಿಕೋ ದೇಶದಲ್ಲಿ ಅದರಿಂದ ಶುಗರ್ ಮಾಡುತ್ತಾರೆ. ಅಲ್ಲಿ ಶುಗರ್‌ಕೇನ್ ಇಲ್ಲದಿರುವುದರಿಂದ ಅವರು ಅದರಿಂದ ಅಲ್ಲಿ ಶುಗರ್ ಮಾಡುತ್ತಾರೆ.

ಕೋಕನಟ್‌ನಿಂದ ಬರತಕ್ಕಂಥ ಜಾಗರಿಯನ್ನು ನಮ್ಮಲ್ಲಿ ಯಾರೂ ತಿನ್ನುವುದಿಲ್ಲ. ಯಾರೋ ಕೆಲವರು ಅದನ್ನು ಔಷಧಿಗೋಸ್ಕರ ಉಪಯೋಗಿಸುತ್ತಾರೆ. ಜನರು ಸಾಮಾನ್ಯವಾಗಿ ಅದನ್ನು ಬಳಸುವುದಿಲ್ಲ. ಅದು ಬಹಳ ದೊಡ್ಡದಾಗಿರತಕ್ಕ ಉದ್ಯಮವಾಗಿದೆ. ನಮ್ಮ ಮಂಗಳೂರಿನಲ್ಲೂ ಕೂಡ ಅದು ಇತ್ತು. ಆದರೆ ಇವತ್ತು ಯಾರೂ ಕೂಡ ಅದನ್ನು ಉಪಯೋಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ಶುಗರ್‌ಕೇನ್‌ನಿಂದ ತಯಾರಿಸತಕ್ಕಂಥ ಸಕ್ಕರೆ ಅಥವಾ ಬೆಲ್ಲ ನಮಗೆ ಬಹಳ ಚೀಪಾಗಿ ಸಿಗುತ್ತಿದೆ. ಜಾಗರಿ ಬಹಳ ದುಬಾರಿಯಾಗುವುದರಿಂದ ಅದನ್ನು ಬೈಪ್ರಾಡಕ್ಟ್ ಆಗಿ ತಯಾರಿಸಿ ಮಾರಾಟ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಅಂಶವನ್ನು ನಾನು ಸದನದ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ನಮ್ಮ ರೈತರಿಗೆ ಕಷ್ಟ ಇದೆ ಎಂಬುದು ನಿಜ. ಒಂದು ಕಡೆ ಅವನು ಬೆಳೆದಂತಹ ಬೆಳೆಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ, ಇನ್ನೊಂದು ಕಡೆ ನುಸಿ ರೋಗದಂತಹ ರೋಗವನ್ನು ನಿಯಂತ್ರಣ ಮಾಡಲಿಕ್ಕಾಗುತ್ತಿಲ್ಲ. ನಮ್ಮ ದೇಶದಲ್ಲಿ ನಿರಂತರವಾಗಿ ಆಯಿಲ್ ಇಂಪೋರ್ಟ್ ಮಾಡಿಕೊಂಡಿದ್ದ ಕಾರಣದಿಂದಲೇ ಬೆಲೆ ಕುಸಿತ ಉಂಟಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವರು ಸಂಸತ್‌ನಲ್ಲಿ ಕರ್ನಾಟಕದ ಸಂಸತ್ ಸದಸ್ಯರಾದ ಮಾನ್ಯ ಜಾಲಪ್ಪನವರ ಪ್ರಶ್ನೆಗೆ ಉತ್ತರಿಸುತ್ತಾ ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ಇವತ್ತು ವರದಿಯಾಗಿರುವುದನ್ನು ಮಾನ್ಯ ಸದಾನಂದಗೌಡರವರೂ ಕೂಡ ನೋಡಿರಬಹುದು. ಈ ಹಿನ್ನೆಲೆಯಲ್ಲಿ ನಾವು ನುಸಿ ರೋಗವನ್ನು ನಿಯಂತ್ರಣ ಮಾಡುವುದಕ್ಕಾಗಿ ನೀರಾ ಇಳಿಸಲು ಅನುಮತಿ ನೀಡುವ ವಿಚಾರವನ್ನು ಕೈಬಿಟ್ಟು ಅದಕ್ಕೆ ಪರ್ಯಾಯವಾಗಿ ಅವರಿಗೆ ಬೆಲೆ ಬರತಕ್ಕಂಥ ರೀತಿಯಲ್ಲಿ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡುವುದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಕೂಡ ಇವತ್ತು ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಕಳೆದ ವರ್ಷ ಕೊಬ್ಬರಿಯನ್ನು ಸಂಪೂರ್ಣವಾಗಿ ನಾವು ಕೊಂಡಿದ್ದನ್ನು ಇವತ್ತಿನವರೆಗೂ ಕೂಡ ಬೇರೆ ಕಡೆಗೆ ರವಾನೆ ಮಾಡಲಿಕ್ಕೆ ನಮಗೆ ಆಗಿಲ್ಲ. ನಮ್ಮ ಗೋಡೋನ್‌ನಲ್ಲಿ ದಾಸ್ತಾನು ಇವತ್ತಿಗೂ ಹಾಗೆಯೇ ಇದೆ. ಹೊಸದಾಗಿ ಕೊಳ್ಳತಕ್ಕಂತಹ ಪ್ರಯತ್ನ ಕೂಡ ಆಗಲಿಲ್ಲ. ಅದನ್ನು ಕೊಳ್ಳತಕ್ಕಂತಹ ಕೆಲಸ ಮಾಡುವಾಗ ನಾಳೆ ಸರ್ವ ಪಕ್ಷಗಳ ನಿಯೋಗ ಹೋಗುವ ಸಮಯದಲ್ಲಿ ಕೇಂದ್ರ ಕೃಷಿ ಮಂತ್ರಿಗಳನ್ನು ಭೇಟಿಯಾದಾಗ ಈ ವಿಷಯ ಹೆಚ್ಚಿನ ಪ್ರಭಾವ ಬೀರಿ ಅದನ್ನು ಕೊಳ್ಳತಕ್ಕಂತಹ ಕೆಲಸವನ್ನು ಮಾಡೋಣವೆಂದು ಹೇಳುತ್ತಾ ನುಸಿ ರೋಗವನ್ನು ನಾವು ನಿಯಂತ್ರಣ ಮಾಡಲೇಬೇಕು, ನಿಯಂತ್ರಣ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ. ನಮ್ಮಲ್ಲಿರತಕ್ಕಂತಹ ಯೋಜನೆ ಏನೆಂದರೆ, ಸಿಪಿಸಿಆರ್‌ಐ ಇರಬಹುದು, ಕೇಂದ್ರ ಸರ್ಕಾರ ಕೊಟ್ಟಿರತಕ್ಕಂತಹ ಮಾನೋಪ್ರೊಟೋಫಾಸ್, ಡೋಸಸ್ ಏನಿದೆ ಅದನ್ನು ಕೊಡುವುದಕ್ಕೋಸ್ಕರ ನಮ್ಮಲ್ಲಿರುವ ಕಾನೂನು ಕಟ್ಟಳೆ ಎಲ್ಲಾ ಬಗೆಹರಿಸಿ ಆಗಸ್ಟ್ 15ರೊಳಗಾಗಿ ರೈತರಿಗೆ ಬೇಕಾಗುವ ಔಷಧಿಗಳನ್ನು ಸಪ್ಲೈ ಮಾಡುವುದಕ್ಕೆ ಸಪ್ಲೈ ಮಾಡುವ ಏಜೆನ್ಸಿಯವರೂ ಕೂಡ ಒಪ್ಪಿದ್ದಾರೆ. 15ನೇ ತಾರೀಖಿನೊಳಗಾಗಿ ಎಲ್ಲಾ ಸಾಮಗ್ರಿಗಳು ಇಲ್ಲಿ ಇರುತ್ತವೆ. ನಾವು ಕಾರ್ಯಕ್ರಮ ಹಾಕಿಕೊಳ್ಳೋಣ. ಹಿಂದೆ 75 ರಿಂದ 50 ಪರ್ಸೆಂಟ್ ಸಬ್ಸಿಡಿ ಇತ್ತು, ಈಗ ನಮ್ಮ ಎಲ್ಲಾ ರೈತರು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ 75 ಪರ್ಸೆಂಟ್ ಸಬ್ಸಿಡಿ ದರದಲ್ಲಿ ಔಷಧಿಗಳನ್ನು ಕೊಡತಕ್ಕಂತಹ

ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಪಲ್ಸ್‌ಪೋಲಿಯೋ ಮಾದರಿಯಲ್ಲಿ ಈ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳುತ್ತೇವೆ. ಇದಕ್ಕೆ ಎಲ್ಲರ ಸಹಕಾರ ಅವಶ್ಯಕವಾಗಿದೆ. ರೀಸರ್ಚ್ ಬಗ್ಗೆ ಒಂದು ಮಾತು ಹೇಳುವುದಾದರೆ, ಕೆಲವು ಎನ್‌ಜಿಓಗಳು ಸಾಕಷ್ಟು ರೀತಿಯಲ್ಲಿ ತಾಂತ್ರಿಕತೆ ಅಳವಡಿಸಿಕೊಂಡು ರೈತರ ಮಧ್ಯದಲ್ಲಿ ಇದ್ದು ಲಾಭ ಆಗಿರತಕ್ಕಂಥಾದ್ದನ್ನು ತೋರಿಸಿದ್ದಾರೆ. ನಮ್ಮ ಯೂನಿವರ್ಸಿಟಿ ಮತ್ತು ನಮ್ಮ ಇಲಾಖೆ ಎನ್‌ಜಿಓಗಳ ಜೊತೆ ಚರ್ಚೆ ಮಾಡಿ ಕೆಲವು ಆಯ್ದ ಪ್ರದೇಶಗಳನ್ನು ಅವರಿಗೆ ಕೊಟ್ಟು ಆನ್-ಫರ್ಮ್ ಮ್ಯಾನೇಜ್‌ಮೆಂಟ್ ಎನ್ನತಕ್ಕಂಥಹ ರೀತಿಯಲ್ಲಿ ಈ ಯೋಜನೆಯನ್ನು ಕೊಟ್ಟು ಸಂಪೂರ್ಣವಾಗಿ ನಾವೇ ಸರ್ಕಾರದಿಂದ ಖರ್ಚು ಕೊಟ್ಟು ನಿಯಂತ್ರಣ ಮಾಡುವುದಕ್ಕೆ ರೀಸರ್ಚ್ ನಾಲೆಡ್ಜ್ ಇಂಪ್ರೂವ್ ಮಾಡುವುದಕ್ಕೆ ನಾವು ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆ. ಅನೇಕ ವಿಷಯಗಳು ಇಲ್ಲಿ ಪ್ರಸ್ತಾಪಕ್ಕೆ ಬಂದವು, ಅವೆಲ್ಲಕ್ಕೂ ನಾನು ಉತ್ತರ ಕೊಡುವುದಕ್ಕೆ ಕಾಲಾವಕಾಶ ಇಲ್ಲ. ನೀರಾ ಇಳಿಸುವುದು ನುಸಿರೋಗ ನಿಯಂತ್ರಣಕ್ಕೆ ಪರ್ಯಾಯ ವ್ಯವಸ್ಥೆಯಲ್ಲ. ಈಗಾಗಲೇ ನಮ್ಮಲ್ಲಿ ಆ್ಯಕ್ಷನ್ ಆಗಿರುವುದರಿಂದ ಅದನ್ನು ಆರ್ಥಿಕ ದೃಷ್ಟಿಯಿಂದ ಮರುಪರಿಶೀಲನೆ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ಹೇಳುತ್ತೇನೆ. ನುಸಿರೋಗ ನಿಯಂತ್ರಣ ಮಾಡುವುದಕ್ಕೆ ಎಲ್ಲಾ ಜನ ಪ್ರತಿನಿಧಿಗಳು ಸಹಕಾರ ಮಾಡಬೇಕು. ರೈತರೂ ಕೂಡ ನಮ್ಮ ಜೊತೆಗೂಡಿ ರೋಗ ನಿಯಂತ್ರಣ ಮಾಡುವ ಕೆಲಸಕ್ಕೆ ತಾವೆಲ್ಲರೂ ಸಹಕಾರಿಯಾಗಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಈ ಬಗ್ಗೆ ಒಂದು ತಜ್ಞರ ಸಮಿತಿ ಮಾಡಬೇಕೆಂದು ಹೇಳಿದ್ದೇನೆ, ಒಂದು ಸದನ ಸಮಿತಿ ಮಾಡಿ ಎಂದು ಹೇಳಿದ್ದೇನೆ. ಆ ಸಮಿತಿಯವರು ಬೇರೆ ರಾಜ್ಯಗಳಿಗೆ ಹೋಗಿ ತಿಳಿದುಕೊಂಡು ಬರಲಿ. ಎಲ್ಲಾ ಕಡೆ ರೈತರು ಕಾನೂನು ಕೈಗೆತ್ತಿಕೊಂಡು ಸರ್ಕಾರದ ವಿರುದ್ಧ ಹೋಗತಕ್ಕಂತಹ ಪರಿಸ್ಥಿತಿ ಬರುತ್ತಿದೆ ಎಂದು ಹೇಳಿದ್ದೇನೆ. ಪ್ರಾಯೋಗಿಕವಾಗಿ ಕೆಲವು ಜಿಲ್ಲೆಗಳಲ್ಲಿ ಅಥವಾ ತಾಲ್ಲೂಕುಗಳಲ್ಲಿ ಪ್ರಯೋಗ ಮಾಡಿ ನೋಡಿ ಎಂದು ಹೇಳಿದ್ದೇನೆ. ಸಾಂಪ್ರದಾಯಿಕವಾದ ಉತ್ತರವನ್ನು ಮಾನ್ಯ ಕೃಷಿ ಇಲಾಖೆಯ ಮಂತ್ರಿಗಳು ಕೊಟ್ಟಿದ್ದಾರೆ. ಅನೇಕ ವಾಸ್ತವಾಂಶಗಳನ್ನು ಸದನದ ಮುಂದೆ ಇಟ್ಟಿದ್ದಾರೆ. ನಾವು ಎಲ್ಲವನ್ನೂ ಸಹ ಅಲ್ಲಗಳೆಯಬಾರದು. ಮಾನ್ಯ ಮುಖ್ಯಮಂತ್ರಿಗಳು ಇದರ ಕಡೆ ಗಮನ ಕೊಟ್ಟಿರುತ್ತಾರೆ, ಅವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಹೇಳಬೇಕಾಗುತ್ತದೆ. ಸದನದ ಹೊರಗಡೆ ಸಹ ಅವರು ಮಾತನಾಡಿದ್ದಾರೆ.

ಶ್ರೀ ಡಿ.ವಿ.ಸದಾನಂದಗೌಡ: ಇದರ ಬಗ್ಗೆ ಹಲವಾರು ವಿಚಾರಗಳನ್ನು ವಿರೋಧ ಪಕ್ಷದ ಕಡೆಯಿಂದ ನಾವು ಪ್ರಸ್ತಾಪ ಮಾಡಿದ್ದೇವೆ. ಆ ಎಲ್ಲಾ ವಿಚಾರಗಳನ್ನು ಸೈಡ್‌ಲೈನ್ ಮಾಡುವ ಕೆಲಸ ಮಾತ್ರ ಆಗಿದೆ. ಏಕೆಂದರೆ ಸಂಶೋಧನೆ ಮಾಡುವುದು, ಮತ್ತೊಂದು ವಿಷಯವನ್ನು ಈಗಾಗಲೇ ತೋಟಗಾರಿಕಾ ಸಚಿವರಿಗೆ ಬರೆದ ಪತ್ರದಲ್ಲಿ ಎಲ್ಲಾ ವೈಜ್ಞಾನಿಕ ವಿಚಾರಗಳಲ್ಲಿ ಇನ್ನೂ

ಪ್ರಯತ್ನಗಳು ಆಗುತ್ತಿವೆ ಎಂದು ಹೇಳಿದರು. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ ಎಂದು ಹೇಳಿದರು. ಒಂದು ಕಡೆ ಕೃಷಿ ಮಂತ್ರಿಗಳು ಈಗಾಗಲೇ ನಮ್ಮ ಪ್ರಯೋಗ ಶಾಲೆಗಳಲ್ಲಿ ಬೇಕಾದಷ್ಟು ಪ್ರಯತ್ನಗಳು ನಡೆಸಿ ಆಗಿದೆ. ಇದಕ್ಕೆ ಇದು ಸೂಕ್ತ ಉತ್ತರ ಅಲ್ಲ ಎನ್ನುವ ಧಾಟಿಯಲ್ಲಿ ಅವರ ಮನಸ್ಸಿನಲ್ಲಿದ್ದ ವಿಷಯವನ್ನು ನೇರವಾಗಿ ಹೇಳಿದ್ದಾರೆ. ನೀರಾ ಇಳಿಸಬಾರದು ಎನ್ನುವ ಮಾತಿಗೆ ನಾವು ಬದ್ಧರಾಗಿದ್ದೇವೆಂದು ಹೇಳುತ್ತಾರೆಯೇ ಹೊರತು, ಪ್ರಾಯೋಗಿಕವಾಗಿ ಎಲ್ಲಾದರೂ ಮಾಡೋಣ ಎಂದು ಹೇಳುವ ಮಾತನ್ನು ಅವರು ಹೇಳುತ್ತಿಲ್ಲ. ರೈತರ ಪರವಾಗಿದ್ದೇವೆಂದು ಒಂದು ಕಡೆ ಹೇಳುತ್ತಿದ್ದಾರೆ, ಇನ್ನೊಂದು ಕಡೆ ಆ ಪ್ರಯತ್ನಗಳನ್ನು ಮಾಡದೇ ಇರುವ ವ್ಯವಸ್ಥೆ ಸರ್ಕಾರದಲ್ಲಿ ಕಾಣುತ್ತದೆ. ಅವರ ಉತ್ತರ ಕೂಡ ರೈತ ವಿರೋಧಿ ನೀತಿಯನ್ನು ಸಾದರಪಡಿಸುತ್ತದೆ. ರೈತರ ಪರವಾದ ಯಾವುದೇ ಕಾಳಜಿ ಇಲ್ಲವೆಂದೂ ಕೂಡ ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದಾರೆ. ಅವರ ಉತ್ತರವನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿ ಸಭೆಯಿಂದ ಹೊರಗೆ ನಡೆದರು)

ಶ್ರೀ ಸಿ.ಬೈರೇಗೌಡ: ನಾವೂ ಕೂಡ ಅವರ ಮಾರ್ಗವನ್ನು ಅನುಸರಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳುವವರು ಇದ್ದರು, ನಮಗೆ ಇಲ್ಲಿಂದ ಹೊರಗಡೆ ಹೋಗಬೇಕೆಂದು ಹೊರಗಡೆ ಹೋಗುವ ಅಭ್ಯಾಸ ಇಲ್ಲ. ರೈತರ ಪರಿಸ್ಥಿತಿ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ರೈತರ ಸಮಸ್ಯೆಯನ್ನು ಬಗೆಹರಿಸಿ ಅವರ ನೆರವಿಗೆ ಬರಬೇಕಾಗಿರುವುದು ಈ ನಿಮಿಷದ ಅವಶ್ಯಕತೆ ಇದೆ. ಆದ್ದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಸುತ್ತೇನೆ, ಈ ವಿಚಾರದಲ್ಲಿ ತಮ್ಮ ಆಲೋಚನೆ ಏನಿದೆ ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಅಧ್ಯಕ್ಷರೆ, ಇದುವರೆಗೆ ವ್ಯವಸಾಯ ಸಚಿವರು ಸರ್ಕಾರದ ಆಲೋಚನೆಗಳನ್ನೇ ಪ್ರತಿನಿಧಿಸುತ್ತಿದ್ದರು. ವ್ಯವಸಾಯ ಸಚಿವರ ಆಲೋಚನೆ ಒಂದು, ಮಾನ್ಯ ಮುಖ್ಯಮಂತ್ರಿಯರ ಆಲೋಚನೆ ಒಂದು ಆಗಲಿಕ್ಕೆ ಸಾಧ್ಯವಿಲ್ಲ. ಆದರೆ ಇದು ಒಂದು ಜ್ವಲಂತ ಸಮಸ್ಯೆ. ಈ ಸಮಸ್ಯೆಗೆ ಸುಲಭವಾದ ಪರಿಹಾರ ನಿಮ್ಮಲ್ಲೂ ಇಲ್ಲ ನಮ್ಮಲ್ಲೂ ಇಲ್ಲ. ಹೇಗೆ ಕ್ಯಾನ್ಸರ್‌ಗೆ ನಾವು ಪರಹಾರವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲವೋ, ಹೇಗೆ ಏಡ್ಸ್‌ಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲವೋ ಹಾಗೆಯೇ ಕೆಲವು ರೋಗರುಜಿನಗಳು ನಮ್ಮ ವ್ಯವಸಾಯದ ಬೆಳೆಗೆ ಬಂದಿರತಕ್ಕಂಥದ್ದಕ್ಕೂ ಕೂಡ ನಾವು ಸುಲಭವಾಗಿ ಯಾವ ಔಷಧಿಗಳನ್ನು, ಪರಿಹಾರೋಪಾಯಗಳನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಇವುಗಳಿಗೆ ನಾವು ಪರಿಹಾರವನ್ನು ಕಂಡು ಹಿಡಿಯಬೇಕಾದರೆ ನಾವು ಪರಿಣಿತರಿಗೆ ಶರಣಾಗಬೇಕು. ಮಾನ್ಯ ಸಿಂಧ್ಯರವರು ಏನು ಸಲಹೆ ಕೊಟ್ಟಿದ್ದಾರೆ, ಆ ಸಲಹೆ ಒಪ್ಪಲು ಯೋಗ್ಯವಾಗಿದೆ, ತಜ್ಞರ ಸಮಿತಿ ನೇಮಕ ಮಾಡುವುದರ ಮೂಲಕ ಈ ಸಮಸ್ಯೆಯ ಹತ್ತು ಹಲವು

ಪ್ರಕಾರಗಳನ್ನು ಇವರು ಅಭ್ಯಾಸ ಮಾಡುವುದಕ್ಕೆ ನಾವು ತಾತ್ವಿಕವಾಗಿ ಒಪ್ಪುತ್ತೇವೆ. ಅದಕ್ಕೆ ಇದರ ಬಗ್ಗೆ ವಿಶೇಷವಾದ ಪರಿಣತಿಯನ್ನು ಪಡೆದಿರತಕ್ಕಂತಹವರ ಪಟ್ಟಿಯನ್ನು ತರಿಸಿಕೊಂಡು ತಜ್ಞರ ಸಮಿತಿಯನ್ನು ನೇಮಕ ಮಾಡುವುದರ ಮೂಲಕ ಈ ಒಂದು ಜ್ವಲಂತ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ದಿಕ್ಕಿನಲ್ಲಿ ಅವರು ಪ್ರಯತ್ನಶೀಲರಾಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ನನಗೆ ಓಪನ್ ಮೈಂಡ್ ಕೂಡ ಇದೆ. ಆದರೆ ಆ ಓಪನ್ ಮೈಂಡ್‌ಗೆ ಇವತ್ತು ನನಗೆ ಯಾರಾದರೂ ನೀರಾ ಇಳಿಸತಕ್ಕಂಥಾದ್ದು ಒಂದು ಪರಿಹಾರ ಎನ್ನತಕ್ಕಂಥಾದ್ದನ್ನು ಸಮಂಜಸವಾಗಿ ನಮಗೆ ಕನ್‌ವಿನ್ಸ್ ಮಾಡಿದರೆ ಅದಕ್ಕೆ ನಾವು ಒಪ್ಪುತ್ತೇವೆ. ಪ್ರತಿಷ್ಠೆಯ ಮೇಲೆ ನಿಲ್ಲತಕ್ಕಂತಹ ಪ್ರಶ್ನೆ ಅಲ್ಲ. ಏಕೆಂದರೆ, ವ್ಯವಸಾಯಗಾರರ ಭವಿಷ್ಯದ ಬಗ್ಗೆ ಚೆಲ್ಲಾಟ ಆಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಸಂಪೂರ್ಣ ಅರಿವು ಸರ್ಕಾರಕ್ಕೆ ಇದೆ. ಸರ್ಕಾರ ಸಂದಿಗ್ಧತೆಯನ್ನು ಫುಲ್ ಪ್ರೂಫ್ ಒಂದು ಪ್ರೋಸೆಸ್ ಇದ್ದಿದ್ದರೆ ಇಷ್ಟು ಚೌಕಾಸಿ ಮಾಡುವುದೇ ಬೇಕಾಗಿರಲಿಲ್ಲ. ಆದ್ದರಿಂದ ನಾವು ತಜ್ಞರ ಸಮಿತಿಯನ್ನು ನೇಮಿಸುತ್ತೇವೆ. ಅವರು ಅಧ್ಯಯನ ಮಾಡಲಿ, ಅವರು ಕೊಡತಕ್ಕಂತಹ ವರದಿ ಆಧಾರದ ಮೇಲೆ ನಾವು, ನೀವು ಸಮಾಲೋಚನೆ ಮಾಡಿ ಮುಂದಿನ ಪರ್ಯಾಯ ಮಾರ್ಗಗಳನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ವ್ಯವಸಾಯ ಸಚಿವರಲ್ಲಿ ನಿನ್ನೆ ದಿವಸ ಒಂದು ಮಾತು ಹೇಳಿದ್ದೆವು, ಗ್ರಾನ್ಯುಲೇಷನ್ ಪ್ಲ್ಯಾಂಟ್‌ಗೆ ಸಬ್ಸಿಡಿಯಲ್ಲಿ ಗೊಬ್ಬರವನ್ನು ಕೊಡಬೇಕು. ಅದನ್ನು ಕೊಡದಿದ್ದರೆ ಗ್ರಾನ್ಯುಲೇಷನ್ ಯೂನಿಟ್ಸ್ ಮತ್ತು ಮಿಕ್ಸರ್ ತಯಾರು ಮಾಡುವವರಿಗೆ ಗೊಬ್ಬರದ ಬೆಲೆ ಜಾಸ್ತಿಯಾಗುತ್ತದೆ. ನಾನು ಮಂತ್ರಿಯಾಗಿದ್ದಾಗ ಇದನ್ನು ಅಲೋ ಮಾಡಿದ್ದೆ. ಅದೇ ರೀತಿಯಲ್ಲಿ ತಾವು ಅವಕಾಶ ಒದಗಿಸಿ ಕೊಡಬೇಕು. ಇಲ್ಲದಿದ್ದರೆ ರೈತರು ಅನಾವಶ್ಯಕವಾಗಿ ಹೆಚ್ಚಿನ ಬೆಲೆ ಕೊಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ನಂಬಿದ್ದೆ. ನಾನು ಅವರಲ್ಲೂ ಕೂಡ ವಿನಂತಿ ಮಾಡಿದ್ದೆ, ಉತ್ತರ ಬರಲಿಲ್ಲ. ದಯವಿಟ್ಟು ಅವರು ಇದರ ಬಗ್ಗೆ ಇವತ್ತಿನ ದಿವಸವಾದರೂ ತಿಳಿಸಬೇಕು.

ಶ್ರೀ ಟಿ.ಬಿ.ಜಯಚಂದ್ರ(ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಭೈರೇಗೌಡರು ಹೇಳಿದ ವಿಷಯ ಸರ್ಕಾರದ ಮುಂದೆ ಇದೆ. ಈಗ ನಮ್ಮ ರಾಜ್ಯದಲ್ಲಿರುವ ಗ್ರಾನ್ಯುಲೇಟೆಡ್ ಫರ್ಟಿಲೈಸರ್‌ನ ಎಲ್ಲಾ ಕಾರ್ಖಾನೆಗಳು ಸ್ಥಗಿತವಾಗಿದೆ. ಕೇಂದ್ರ ಸರ್ಕಾರದ ಸರ್ಕ್ಯುಲರ್‌ನಲ್ಲಿ ಏನಿತ್ತು ಅದೇ ರೀತಿ ಸಬ್ಸಿಡೈಸ್ಡ್ ಗೊಬ್ಬರವನ್ನು ಕೊಡಬಾರದು ಎಂದು ಪುನರುಚ್ಛಾರ ಮಾಡಿದ್ದರಿಂದ ಹಾಗೂ ನಮ್ಮಲ್ಲಿ ಕೋರ್ಟ್‌ನಲ್ಲಿದ್ದಂಥ ಕೇಸ್‌ಗಳೆಲ್ಲಾ ಇವೊತ್ತು ಇತ್ಯರ್ಥವಾಗಿ ನಾವು ಈಗ ತಾತ್ಕಾಲಿಕವಾಗಿ ನಿಲುಗಡೆಯನ್ನು ಮಾಡಿದ್ದೇವೆ. ಈಗಾಗಲೇ ಆ ಕಾರ್ಖಾನೆಗಳವರು ಕೋರ್ಟ್‌ಗೆ ಹೋಗಿ ಇದಕ್ಕೆ ತಡೆಯಾಜ್ಞೆಯನ್ನು ತಂದಿದ್ದಾರೆ. ಇವೊತ್ತು ಆ ವಿಷಯ ಸರ್ಕಾರದ

ಪರಿಶೀಲನೆಯಲ್ಲೂ ಇದೆ. ಇದರ ಜೊತೆಗೆ ಇದರ ಬಗ್ಗೆ ಶಾಶ್ವತ ಪರಿಹಾರ ಕಂಡುಹಿಡಿದು ಬಗೆಹರಿಸಬೇಕು ಎನ್ನುವ ವಿಷಯದ ಬಗ್ಗೆ ಕೇಂದ್ರದಲ್ಲಿ ನಾವು ಹತ್ತಾರು ಬಾರಿ ಮನವಿಯನ್ನು ಮಾಡಿದ ಮೇಲೆ ಅವರೂ ಕೂಡ ಕೇಂದ್ರದ ಅಧಿಕಾರಿಗಳನ್ನು ಕಳುಹಿಸಿ ಇದರ ಬಗ್ಗೆ ಎಲ್ಲಾ ರೀತಿಯ ವಿಚಾರಗಳನ್ನು ಮಾಡಿದ್ದಾರೆ. ಈ ವಿಷಯದಲ್ಲಿ ಬಹುಶಃ ಕೇಂದ್ರ ಸರ್ಕಾರ ಕೂಡ ಸ್ಪಂದಿಸುತ್ತದೆ ಎನ್ನುವ ವಿಶ್ವಾಸ ನಮಗೆ ಇದೆ. ಆದರೆ ಸಧ್ಯದ ಪರಿಸ್ಥಿತಿಯಲ್ಲಿ ಗೊಬ್ಬರದ ಬೆಲೆ ಜಾಸ್ತಿಯಾಗಿ ಇಂದು ಗ್ರಾನ್ಯುಲೇಟೆಡ್ ಫರ್ಟಿಲೈಸರ್ ಸಿಗದೇ ಇರುವ ಹಾಗಿದೆಯಲ್ಲದೆ ರಾಜ್ಯ ಸರ್ಕಾರವೇ ಮೂರು ಕೋಟಿ ರೂಪಾಯಿಗಳ ಬಂಡವಾಳ ಹಾಕಿ ಪ್ರಾರಂಭ ಮಾಡಿದ್ದ ಕಾರ್ಖಾನೆಯೇ ಈಗ ನಿಂತು ಹೋಗಿರುವ ಹಿನ್ನೆಲೆಯಲ್ಲಿ ನಾನು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಪರಿಶೀಲನೆ ಮಾಡಿ ಆದಷ್ಟು ಬೇಗ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ. ಇನ್ನು ಇನ್‌ಶ್ಯೂರೆನ್ಸ್ ವಿಚಾರದಲ್ಲಿ ಈಗಾಗಲೇ ನಾವು ಒಂದು ತಿಂಗಳು ಮುಂದೆ ಹಾಕುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನಮ್ಮ ಅಧಿಕಾರಿಗಳು ಈಗಾಗಲೇ ದೆಹಲಿಯಲ್ಲಿದ್ದು ಇನ್ನೆರಡು ದಿವಸಗಳಲ್ಲಿ ಬಹುಶಃ ವರ್ತಮಾನ ಬರಬಹುದು. ಇನ್‌ಶ್ಯೂರೆನ್ಸ್ ಡೇಟ್‌ನ್ನು ಒಂದು ತಿಂಗಳು ಮುಂದಕ್ಕೆ ಹಾಕುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ಆ ಬಗ್ಗೆ ತೀರ್ಮಾನ ಬಂದ ಮೇಲೆ ಅದನ್ನು ಜಾರಿಗೊಳಿಸಲಾಗುವುದು.